# CARMEL SEVA SADAN

Huvinhadagali - Bellary

Volume - 1 No. - 1 July - 2003


















SOUVENIR

Scanned by CamScanner

# CONTENTS


| | | Page No. |
|---|---|---|
| 1. | Director's Desk .... | 3 |
| 2. | Messages .... | 4-7 |
| 3. | Glimpses into the History of Hadagali .... | 8 |
| 4. | Opinions .... | 11 |
| 5. | Free Boarding .... | 12 |
| 6. | Computer Centre .... | 13 |
| 7. | Tailoring Centres .... | 14 |
| 8. | Unit 1 Varakanahalli .... | 15 |
| 9. | Unit 2 Hadagali .... | 16 |
| 10. | Unit 3 Hadagali Town .... | 17 |
| 11. | Unit 4 Mahajanadahalli .... | 18 |
| 12. | Unit 5 G. P. Thanda .... | 19 |
| 13. | Unit 6 Hadagali .... | 20 |
| 14. | Independence Day .... | 21 |
| 15. | Tuition Classes 1. Hadagali .... | 22 |
| | 2. Mahajanadahalli .... | 22 |
| | 3. Thalkal .... | 22 |
| | 4. Huglur .... | 23 |
| 16. | Girl Child Scholarship .... | 24 |
| 17. | Republic Day Celebration .... | 25 |
| 18. | Christmas Day Celebration .... | 26 |
| 19. | Driving School .... | 27 |
| 20. | On Their Feet .... | 28 |
| 21. | Medical Camps .... | 30 |
| 22. | Dental Camp at Talkal .... | 31 |
| 23. | Dental Camp at Muvenur .... | 32 |
| 24. | Dental Camp at Sogi .... | 33 |
| 25. | Work Hand in Hand .... | 34 |
| 26. | Sports and Games .... | 36 |
| 27. | Youth Empowerment .... | 37 |
| 28. | Annual Day .... | 38 |
| 29. | News .... | 39 |



Scanned by CamScanner

# ಪರಿವಿಡಿ


| | | ಪುಟ |
|---|---|---|
| 1. ನಿರ್ದೇಶಕರ ಲೇಖನಿಯಿಂದ | .......... | 3 |
| 2. ಸಂದೇಶಗಳು | .......... | 4–7 |
| 6. ಪ್ರಗತಿ ಪಥದತ್ತ | .......... | 8 |
| 7. ಅನಿಸಿಕೆ | .......... | 11 |
| 8. ವಿದ್ಯಾರ್ಥಿ ನಿಲಯ | .......... | 12 |
| 9. ಕಂಪ್ಯೂಟರ್ ಕೇಂದ್ರ | .......... | 13 |
| 10. ಹೊಲಿಗೆ ತರಬೇತಿ ಕೇಂದ್ರ | .......... | 14 |
| 11. ಘಟಕ 1 – ವರಕನಹಳ್ಳಿ | .......... | 15 |
| 12. ಘಟಕ 2 – ಹಡಗಲಿ | .......... | 16 |
| 13. ಘಟಕ 3 – ಹಡಗಲಿ ನಗರ | .......... | 17 |
| 14. ಘಟಕ 4 – ಮಹಾಜನದಹಳ್ಳಿ | .......... | 18 |
| 15. ಘಟಕ 5 – ಗೋವಿಂದಪುರ ತಾಂಡ | .......... | 19 |
| 16. ಘಟಕ 6 – ಹಡಗಲಿ | .......... | 20 |
| 17. ಸ್ವಾತಂತ್ರ್ಯೋತ್ಸವ | .......... | 21 |
| 18. ಟ್ಯೂಷನ್ ಕ್ಲಾಸ್ | | |
| ಹಡಗಲಿ | .......... | 22 |
| ಮಹಾಜನದಹಳ್ಳಿ | .......... | 22 |
| ತಲ್‌ಕಲ್ | .......... | 23 |
| ಹುಗ್ಲೂರ್ | .......... | 23 |
| 19. ವಿದ್ಯಾರ್ಥಿನಿಯರಿಗೆ ಸ್ಫೂರ್ತಿ | .......... | 24 |
| 20. ಗಣರಾಜ್ಯೋತ್ಸವ | .......... | 25 |
| 21. ಕ್ರಿಸ್ತ ಜಯಂತಿ | .......... | 26 |
| 22. ವಾಹನ ಚಾಲಕರ ತರಬೇತಿ | .......... | 27 |
| 23. ಸ್ವ–ಉದ್ಯೋಗಭರಿತರಾದವರು | .......... | 28 |
| 24. ಆರೋಗ್ಯಭಾಗ್ಯ | .......... | 30 |
| 25. ತಲ್‌ಕಲ್‌ನಲ್ಲಿ ಉಚಿತ ದಂತ ಶಿಬಿರ | .......... | 31 |
| 26. ಮುದೆನೂರಿನಲ್ಲಿ ಉಚಿತ ದಂತ ಚಿಕಿತ್ಸಾ ಶಿಬಿರ | .......... | 32 |
| 27. ಸೋಗಿ ಗ್ರಾಮದಲ್ಲಿ ಉಚಿತ ದಂತ ಚಿಕಿತ್ಸಾ ಶಿಬಿರ | .......... | 33 |
| 28. ಜಂಟಿ ಕೆಲಸ | .......... | 34 |
| 29. ಆಟೋಟ ಸ್ಪರ್ಧೆ | .......... | 36 |
| 30. ಯುವ ಶಕ್ತಿ | .......... | 37 |
| 31. ವಾರ್ಷಿಕೋತ್ಸವ | .......... | 38 |
| 32. ಅನಿಸಿಕೆಗಳು | .......... | 39 |
| 33. ಜಾಹೀರಾತು | .......... | 40–41 |


Scanned by CamScanner

# ನಿರ್ದೇಶಕರ ಲೇಖನಿಯಿಂದ .........




ಹೂವಿನಹಡಗಲಿ - ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕು. ಈ ತಾಲ್ಲೂಕು ಸುಮಾರು 120 ಹಳ್ಳಿಗಳನ್ನು ಒಳಗೊಂಡಿದೆ. ಇಲ್ಲಿ ಹೆಚ್ಚಿನ ಹಳ್ಳಿಗರು ಬಡತನ ರೇಖೆಗಿಂತಲೂ ಕೆಳಗಿನ ಮಟ್ಟದಲ್ಲಿದ್ದಾರೆ. ಅದೇ ರೀತಿ ವಿದ್ಯಾಭ್ಯಾಸದಲ್ಲೂ ತುಂಬಾ ಹಿಂದುಳಿದಿದ್ದಾರೆ. ಇದಕ್ಕೆ ಮುಖ್ಯ ಕಾರಣ ಮಳೆಯ ಅಭಾವ. ಮಳೆ ಇಲ್ಲದೆ ಬೆಳೆ ಇಲ್ಲ. ಬೆಳೆ ಇಲ್ಲದೆ ಜೀವನ ಬಹಳ ಕಷ್ಟಕರ. ಅದಕ್ಕಾಗಿ ಅನೇಕ ಜನರು ಕಾಫಿತೋಟಗಳಿಗೆ ವಲಸೆ ಹೋಗುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿದ್ದಂತಹ ಜನರ ಹಾಗೂ ಸಮಾಜದ ಸೇವೆ ಮಾಡಲು ಕಾರ್ಮೆಲ್ ಸಭೆಯ ಗುರುಗಳು ಹಡಗಲಿ ತಾಲ್ಲೂಕನ್ನು ಆರಿಸಿರುವುದು ನಿಜವಾಗಿಯೂ ಸಂತೋಷದ ವಿಷಯ.

ಸಮಾಜಸೇವೆ ಮಾಡಬೇಕಾದರೆ ಒಂದು ನೆಲೆ ಬೇಕು, ಕಟ್ಟಡ ಬೇಕು, ಜನರ ಪರಿಚಯವಾಗಬೇಕು. ಇದಕ್ಕಾಗಿ 1998 ಜುಲೈ ತಿಂಗಳ ಹದಿನೇಳನೇ ತಾರೀಖಿನಂದು ಸ್ವಾಮಿ ಹೆನ್ರಿ ಮೊರಾಸ್ ಹಾಗೂ ಸಹೋದರ ಜೋಕಿಮ್ ಅವರು ಮಂಗಳೂರಿನಿಂದ ಹಡಗಲಿಗೆ ಪ್ರಯಾಣಿಸಿದರು. ಒಂದು ಬಾಡಿಗೆಯ ಮನೆಯನ್ನು ತೆಗೆದುಕೊಂಡು ಹಡಗಲಿ ತಾಲೂಕಿನ ಜನರ ಮಧ್ಯೆ ಬೆರೆಯಲು ಆರಂಭಿಸಿದರು. ಕ್ರಮೇಣ ಸ್ವಾಮಿ ಹೆನ್ರಿ ಮೊರಾಸ್‌ರವರು ಒಂದು ಜಮೀನನ್ನು ಖರೀದಿಸಿ ಅಲ್ಲಿ ಒಂದು ಸುಂದರವಾದ ಬಾಲ ಯೇಸುವಿನ ಭವ್ಯ ದೇವಾಲಯವನ್ನು ಹಾಗೂ ಕಾರ್ಮೆಲ್ ಸಮಾಜ ಸೇವಾ ಸಂಸ್ಥೆಗೆ ಬೇಕಾದ ಕಟ್ಟಡವನ್ನು ನಿರ್ಮಿಸಿದರು. ಇಷ್ಟು ಸಿದ್ಧತೆಯಾಗಬೇಕಾದರೆ ನಾಲ್ಕು ವರ್ಷಗಳೇ ಬೇಕಾದವು. ಈ ವರ್ಷಗಳಲ್ಲಿ ಅವರಿಗೆ ಸಹಾಯಕರಾಗಿ ಸಹೋದರ ವಿಕ್ಟರ್, ಸೆಲ್ವ ಮತ್ತು ಲಿಗೋರಿಯವರು ವರ್ಷಕ್ಕೆ ಒಬ್ಬೊಬ್ಬರಂತೆ ಸೇವೆ ಸಲ್ಲಿಸಿದರು. 25-1-2002ರಂದು ಈ ಕಟ್ಟಡದ ಉದ್ಘಾಟನೆ ಮಾಡಲಾಯಿತು. ಅಂದಿನಿಂದ ಮೇ ತಿಂಗಳ ತನಕ ಸುಮಾರು ಐದು ತಿಂಗಳು ಸ್ವಾಮಿ ನೆಲ್ಸನ್‌ರವರು ಸ್ವಾಮಿ ಹೆನ್ರಿಯವರಿಗೆ ಸಂಗಾತಿಯಾಗಿ ಸಮಾಜಸೇವಾ ಕಾರ್ಯದಲ್ಲಿ ತೊಡಗಿ ಸೇವೆ ಸಲ್ಲಿಸಿದರು.

2002 ಜೂನ್ ತಿಂಗಳಲ್ಲಿ ನನ್ನನ್ನು ಗೋವಾದಿಂದ ಹಡಗಲಿಗೆ ಕಾರ್ಮೆಲ್ ಸೇವಾ ಸದನದ ನಿರ್ದೇಶಕರನ್ನಾಗಿ ನೇಮಿಸಿದಾಗ, ಮೊದಲು ಹೇಗಪ್ಪ ನಾನು ಅಲ್ಲಿ ಸೇವೆ ಸಲ್ಲಿಸಲಿ? ಎಂಬ ಚಿಂತೆ ಮೂಡಿತು. ಏಕೆಂದರೆ ಹೊಸ ಊರು, ಹೊಸ ಜನ, ಹೊಸ ವಾತಾವರಣ, ಬೇರೆ ಬೇರೆ ಸಂಸ್ಕೃತಿ, ಆದರೆ ಅಧಿಕಾರಿಗಳ ಮಾತಿಗೆ ವಿಧೇಯತೆಯಿಂದ ನಡೆಯುವುದು ನನ್ನ ಕರ್ತವ್ಯ. ನನ್ನಿಂದ ಏನು ಮಾಡಲು ಸಾಧ್ಯವೋ ಅದನ್ನು ಮಾಡುವೆನು ಎಂದು ಹಡಗಲಿಗೆ ಹೋದೆ. ಆದರೆ ಅಲ್ಲಿ ವಂ. ಸ್ವಾಮಿ ಹೆನ್ರಿ ಮೊರಾಸ್‌ರವರ ಆಹ್ವಾನ, ಜನರ ಪ್ರೀತಿ, ಸಹಕಾರ, ನೋಡಿ ಅತ್ಯಾನಂದವಾಯಿತು. ಅಂದಿನಿಂದ ಈವತ್ತಿನವರೆಗೆ ದೇವರ ದಯೆಯಿಂದ, ಎಲ್ಲರ ಸಹಕಾರದಿಂದ ಹಮ್ಮಿಕೊಂಡ ಎಲ್ಲಾ ಸಮಾಜಸೇವಾ ಕಾರ್ಯಗಳು ಯಶಸ್ವಿಯಾಗಿವೆ ಎಂದು ಹೇಳಲು ಸಂತೋಷಪಡುತ್ತೇನೆ. ಉಚಿತ ವಿದ್ಯಾರ್ಥಿ ನಿಲಯ, ಬಡಮಕ್ಕಳಿಗೆ ವಿದ್ಯಾರ್ಥಿ ವೇತನ, ಆರೋಗ್ಯ ತಪಾಸಣ ಮತ್ತು ಚಿಕಿತ್ಸಾ ಶಿಬಿರಗಳು, ಹೊಲಿಗೆ ತರಬೇತಿ ಕೇಂದ್ರಗಳು, ಟ್ಯೂಶನ್ ಕಾರ್ಯಕ್ರಮಗಳು, ಕಂಪ್ಯೂಟರ್ ತರಬೇತಿ ಕೇಂದ್ರ, ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ ಆಚರಣೆ, ಕ್ರಿಸ್ಮಸ್-ಈಸ್ಟರ್ ಆಚರಣೆಗಳು, ಯುವಕ ಯುವತಿಯರಿಗೆ, ಮಕ್ಕಳಿಗೆ, ಕ್ರಿಕೆಟ್, ಆಟೋಟ ಸ್ಪರ್ಧೆಗಳು, ಮನೋರಂಜನೆಗಳಾದ ನೃತ್ಯ, ಹಾಡು ಸ್ಪರ್ಧೆಗಳು ಇತ್ಯಾದಿ.

ಈ ಎಲ್ಲಾ ಸಮಾಜಸೇವಾ ಕಾರ್ಯಗಳ ಯಶಸ್ಸಿಗೆ ಅನೇಕರ ಸಹಕಾರವಿದೆ. ಕಾರ್ಮೆಲ್ ಸಭೆಯ ಎಲ್ಲಾ ಗುರುಗಳು ಹಾಗೂ ಸಹೋದರರು, ಹೆಗಲಿಗೆ ಹೆಗಲನ್ನು ಕೊಟ್ಟು ಸಹಕರಿಸಿದ ಮಠಾಧಿಪತಿ ವಂ. ಸ್ವಾಮಿ ಹೆನ್ರಿ ಮೋರಾಸ್ ಹಾಗೂ ಸಹೋದರ ಆನಂದ್, ಸ್ವದೇಶ-ಪರದೇಶದ ಎಲ್ಲಾ ದಾನಿಗಳು, ಪ್ರತ್ಯೇಕವಾಗಿ ಕು. ಅನ್ನ ಮತ್ತು ಸ್ವಾಮಿ ರೊಬೆರ್ತೊ, ಹಡಗಲಿಯ ಜನತೆ, ಎಲ್ಲಾ ಸಂಸ್ಥೆಗಳು ಹಾಗೂ ಸಂಸ್ಥಾಧಿಕಾರಿಗಳ ಪ್ರೋತ್ಸಾಹ, ಸಹಕಾರ, ಎಲ್ಲಾ ಪತ್ರಕರ್ತರು ಮತ್ತು ವೈದ್ಯರ ಉಚಿತ ಸೇವೆ ಹಾಗೂ ಕಾರ್ಮೆಲ್ ಸೇವಾ ಸದನದ ಎಲ್ಲಾ ಸಿಬ್ಬಂದಿ ವರ್ಗ. ಇಷ್ಟು ಮಾತ್ರವಲ್ಲದೇ ಎಲ್ಲಾ ಹಳ್ಳಿಗಳ ಗ್ರಾಮಸ್ಥರ ಹಾಗೂ ಯುವಕರ ಸಹಕಾರ, ಪ್ರೀತಿಯು ಈ ಯಶಸ್ಸಿಗೆ ಕಾರಣವಾಗಿದೆ. ಈ ಸಂಚಿಕೆಯನ್ನು ಹೊರತರಲಿರುವ ಈ ಸಂದರ್ಭದಲ್ಲಿ ಈ ಎಲ್ಲಾ ಜನರನ್ನು ನೆನಪಿಸಿ, ಹೃದಯಾಳದಿಂದ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಹಾಗೂ ದೇವರಲ್ಲಿ ಎಲ್ಲರಿಗೋಸ್ಕರ ಪ್ರಾರ್ಥಿಸುತ್ತೇನೆ. ಈ ಸಂಚಿಕೆಯನ್ನು ಹೊರತರಲು ಧನಸಹಾಯ ನೀಡಿದ, ಸಂಚಿಕೆಯನ್ನು ಸಿದ್ಧಗೊಳಿಸಲು ಸಹಕರಿಸಿದ ಪ್ರತಿಯೊಬ್ಬರನ್ನೂ ಸ್ಮರಿಸಿ, ವಂದಿಸುತ್ತೇನೆ. ಇದೇ ರೀತಿ ಮುಂದಿನ ವರ್ಷವು ಇದಕ್ಕಿಂತ ಹೆಚ್ಚಾಗಿ ಜನರ ಸೇವೆ ಮಾಡಲು ನಿಮ್ಮ ಸಹಕಾರ, ಉತ್ತೇಜನ, ಪ್ರಾರ್ಥನೆಯನ್ನು ಕೋರುತ್ತೇನೆ. 'ಪರರ ಸೇವೆಯೇ ಪರಮಾತ್ಮನ ಸೇವೆ, ಪರರಲ್ಲಿ ನೀ ದೇವರನ್ನ ಕಾಣು' ಎಂದು ಬೋಧಿಸಿ ಜೀವನದಲ್ಲಿ ಕಾರ್ಯಗತ ಮಾಡಿ ತೋರಿಸಿ, ನನಗೆ ಪ್ರೇರೇಪಿಸಿದ, ಪ್ರಭು ಕ್ರಿಸ್ತರು ನಿಮ್ಮೆಲ್ಲರನ್ನು ಆಶೀರ್ವದಿಸಲಿ.

Scanned by CamScanner



Fr. **William Miranda**, OCD
*Director*

# From the Director's Desk ..........

Huvina Hadagali is one of the taluks of Bellary District. This taluk comprises of around 120 villages. Most of the people here are economically very poor and the standard of education is very low. Scanty rainfall is said to be one among the many factors for so much poverty. This atmosphere forces people to migrate to distant coffee estates in order to make their living. In such circumstances the Carmelite Fathers of the Karnataka–Goa Province chose this taluk to accompany the local people to come out from such biting poverty.

To do this service effectively one needs a strong platform, an edifice and basic knowledge of the people around and their standard of living. Staying in a rented house they began to toil with the people.

It was Rev. Fr. Henry Moras together with Br. Joachim Rodrigues who first arrived at Hadagali. After acquiring enough land, it took about 4 years to begin our ministry systematically. The building of a beautiful Church dedicated to Infant Jesus and erecting necessary structures for Carmel Seva Sadan were completed at this time. Brs. Victor P., D. Selvam and Liguory Crasta who rendered their valuable services for the welfare of the people. Lately Rev. Fr. Nelson Pinto accompanied Fr. Henry in his service.

From June 1st onwards I was appointed as the Director of Carmel Seva Sadan. Br. Anand Kumar came to our community. With the encouragement and support of Very Rev. Fr. Provincial and many a member of our Province, along with generous contribution of the benefactors, both from India and abroad, we could start different developmental programmes in 8 villages. At present we help and encourage the people in the following fields.

Free Boarding for boys, Girl Child Scholarship, Tailoring Centre, Driving School, Tuition Programmes, Computer Centre, Medical Camps, Independence Day Celebration, Republic Day Celebration, Christmas Celebration, Youth Activities, Competitions (sports, games, singing, dances) etc. We are extremely happy to publish a bird's eye-view of all these progressive activities along with snaps and literature.

I am sincerely grateful to all who have helped us in anyway in our efforts to serve the people of Hadagali and bringing out this Souvenir.



Scanned by CamScanner



ಅತೀ ವಂ। ಡಾ। ಜೋಸೆಫ್ ಡಿ'ಸಿಲ್ವ
ಧರ್ಮಾಧ್ಯಕ್ಷರು

ಬಳ್ಳಾರಿ ಧರ್ಮಕ್ಷೇತ್ರ
ಧರ್ಮಾಧ್ಯಕ್ಷರ ನಿವಾಸ, ಕಂಟೋನ್ಮೆಂಟ್
ಬಳ್ಳಾರಿ - 583 104

ಖಾಸಗಿ : 240308
ಕಛೇರಿ : 245255

Fax : 08392 - 40308
Email: bphousebly@hotmail.com

ದಿನಾಂಕ : 29-03-2003

# ಸಂದೇಶ

ಕೆಲವೇ ವರ್ಷಗಳ ಹಿಂದೆ ಹಮ್ಮಿಕೊಂಡಿರುವ ಸಮಾಜಸೇವಾ ಕಾರ್ಯಗಳನ್ನೊಳಗೊಂಡ ಸ್ಮರಣ ಸಂಚಿಕೆಯನ್ನು ಹೊರತರುತ್ತಿರುವ ವಿಷಯ ಸಂತೋಷದಾಯಕ ಮತ್ತು ಶ್ಲಾಘನೀಯ. ಐದು ವರ್ಷಗಳಿಂದೀಚೆ ಹಮ್ಮಿಕೊಂಡ ನಿಮ್ಮ ಸಮಾಜಸೇವಾ ಕಾರ್ಯಗಳು ಮುಂದಿನ ಭವಿಷ್ಯ ಮತ್ತು ಬೆಳವಣಿಗೆಗೊಂದು ತಕ್ಕ ಬುನಾದಿಯಾಗಿದೆ. ನಿಮ್ಮೆಲ್ಲಾ ಸೇವಾಕಾರ್ಯ ಸಂಘ ಸಂಸ್ಥೆಗಳ ಮೇಲೆ ಆಶೀರ್ವಾದ ಕೋರುತ್ತೇನೆ. ಬಳ್ಳಾರಿ ಧರ್ಮಕ್ಷೇತ್ರದಲ್ಲಿ ಜಗದೋದ್ಧಾರಕ ಯೇಸು ಪ್ರಭುವಿನ ಸಾಮ್ರಾಜ್ಯವನ್ನು ನಿಮ್ಮ ಸೇವೆ ಮತ್ತು ಕಾರ್ಯಗಳ ಮೂಲಕ ತೋರ್ಪಡಿಸುತ್ತಾ ಕ್ರಿಸ್ತರ ಸಂದೇಶವನ್ನು ಹರಡುವ ನಿಮ್ಮೆಲ್ಲಾ ಕಾರ್ಯಗಳು ನಿಮಗೆ ಯಶಸ್ಸನ್ನು ತರುವಂತೆ ಕಾರ್ಮೆಲ್ ಮಾತೆಯು ನಿಮ್ಮೆಲ್ಲರಿಗಾಗಿ ಪ್ರಾರ್ಥಿಸಲೆಂದು ಬಯಸುತ್ತೇನೆ.

ಆಶೀರ್ವಾದ ಮತ್ತು ಶುಭಕಾಮನೆಗಳೊಂದಿಗೆ,

ಕ್ರಿಸ್ತರಲ್ಲಿ ನಿಮ್ಮವ,

(ಜೋಸೆಫ್ ಡಿ'ಸಿಲ್ವ)

Scanned by CamScanner



**Most Rev. Dr. Joseph D'Silva**
*Bishop of Bellary*

DIOCESE OF BELLARY
Bishop's House, Cantonment
Bellary-583 104
Karnataka, India
✆ Per. : 240308
Off. : 240315
245255
Fax : 08392 - 40308
Email: bphousebly@hotmail.com

Dated: 29-03-2003

# *Message*

I am happy to note that you are going to publish a souvenir of your work at Huvinahadagali started just a couple of years ago. Within the last five years you have made a modest beginning in the line of social work. I bless all your enterprises. May Mother Mary intercede for all of you so that you may continue to work for the spread of kingdom of her Son in that part of the Diocese of Bellary.

With my blessings and best wishes,

Yours in our Lord,

**(Joseph D'Silva)**

Scanned by CamScanner



ಅತಿ ವಂ। ಡಾ। ಜೋಸೆಫ್ ಡಿ'ಸಿಲ್ವ
ಧರ್ಮಾಧ್ಯಕ್ಷರು

ಬಳ್ಳಾರಿ ಧರ್ಮಕ್ಷೇತ್ರ
ಧರ್ಮಾಧ್ಯಕ್ಷರ ನಿವಾಸ, ಕಂಟೋನ್ಮೆಂಟ್
ಬಳ್ಳಾರಿ - 583 104

✆ ಖಾಸಗಿ : 240308
ಕಛೇರಿ : 245255

Fax : 08392 - 40308
Email: bphousebly@hotmail.com

ದಿನಾಂಕ : 29-03-2003

# ಸಂದೇಶ

ಕೆಲವೇ ವರ್ಷಗಳ ಹಿಂದೆ ಹಮ್ಮಿಕೊಂಡಿರುವ ಸಮಾಜಸೇವಾ ಕಾರ್ಯಗಳನ್ನೊಳಗೊಂಡ ಸ್ಮರಣ ಸಂಚಿಕೆಯನ್ನು ಹೊರತರುತ್ತಿರುವ ವಿಷಯ ಸಂತೋಷದಾಯಕ ಮತ್ತು ಶ್ಲಾಘನೀಯ. ಐದು ವರ್ಷಗಳಿಂದೀಚೆ ಹಮ್ಮಿಕೊಂಡ ನಿಮ್ಮ ಸಮಾಜಸೇವಾ ಕಾರ್ಯಗಳು ಮುಂದಿನ ಭವಿಷ್ಯ ಮತ್ತು ಬೆಳವಣಿಗೆಗೊಂದು ತಕ್ಕ ಬುನಾದಿಯಾಗಿದೆ. ನಿಮ್ಮೆಲ್ಲಾ ಸೇವಾಕಾರ್ಯ ಸಂಘ ಸಂಸ್ಥೆಗಳ ಮೇಲೆ ಆಶೀರ್ವಾದ ಕೋರುತ್ತೇನೆ. ಬಳ್ಳಾರಿ ಧರ್ಮಕ್ಷೇತ್ರದಲ್ಲಿ ಜಗದೋದ್ಧಾರಕ ಯೇಸು ಪ್ರಭುವಿನ ಸಾಮ್ರಾಜ್ಯವನ್ನು ನಿಮ್ಮ ಸೇವೆ ಮತ್ತು ಕಾರ್ಯಗಳ ಮೂಲಕ ತೋರ್ಪಡಿಸುತ್ತಾ ಕ್ರಿಸ್ತರ ಸಂದೇಶವನ್ನು ಹರಡುವ ನಿಮ್ಮೆಲ್ಲಾ ಕಾರ್ಯಗಳು ನಿಮಗೆ ಯಶಸ್ಸನ್ನು ತರುವಂತೆ ಕಾರ್ಮೆಲ್ ಮಾತೆಯು ನಿಮ್ಮೆಲ್ಲರಿಗಾಗಿ ಪ್ರಾರ್ಥಿಸಲೆಂದು ಬಯಸುತ್ತೇನೆ.

ಆಶೀರ್ವಾದ ಮತ್ತು ಶುಭಕಾಮನೆಗಳೊಂದಿಗೆ,

ಕ್ರಿಸ್ತರಲ್ಲಿ ನಿಮ್ಮವ,

+

(ಜೋಸೆಫ್ ಡಿ'ಸಿಲ್ವ)

Scanned by CamScanner

# ಕಾರ್ಮೆಲ್ ಸೇವಾ ಸದನ



''ಕ್ರಿಯಕ್ಕನುಸಾರ ಲೆಕ್ಕಿಸದೇ ಸೇವೆ ಮಾಡಿ.''

ಜನಸೇವೆಯೇ ಜನಾರ್ಧನ ಸೇವೆ, ಪರರ ಸೇವೆಯೇ ಪರಮಾತ್ಮನ ಸೇವೆ, ಇದೇ ಯೇಸುಕ್ರಿಸ್ತರ ಬೋಧನೆಯ ಸಾರಾಂಶ ಮತ್ತು ಸಿದ್ಧಾಂತ. ಎಷ್ಟೋ ಸಾರಿ ನಾವು ದೇವರನ್ನು ಪೂಜಿಸುತ್ತೇವೆಂದು ಭಾವಿಸಿ, ಪೂಜೆ, ಸಂಸ್ಕಾರವಿಧಿಗಳನ್ನು ನೆರವೇರಿಸುತ್ತೇವೆ. ಆದರೆ ನಿಜವಾಗಿ ದೇವರು ನಮ್ಮ ಆಚರಣೆ ಯಿಂದ ತೃಪ್ತಿ ಹೊಂದಿದ್ದಾರೆಂದು ತಿಳಿಯುವುದಾದರೂ ಹೇಗೆ?

ಸೇವೆ ಮಾಡಬೇಕೆಂಬ ಅಭಿಲಾಷೆ ಬರುವುದು ಬೇರೆಯವರ ವಸ್ತು ಮತ್ತು ಸಾಮಗ್ರಿಗಳಿಂದಲ್ಲ, ಬದಲಾಗಿ ಪರಮಾತ್ಮನ ಸಾನ್ನಿಧ್ಯದಿಂದಲೇ. ದೇವರು ಮಾನವನನ್ನು ಭೇಟಿಯಾಗುವುದು ನಿರ್ಗತಿಕರು, ನಿರಾಶ್ರಿತರು, ಸಮಾಜದಿಂದ ಶೋಷಣೆಗೊಳಗಾದವರು, ಅಸಹಾಯಕತೆ ಮತ್ತು ಅವಶ್ಯಕತೆ-ಯಿಂದ ವಂಚಿತರಾದವರು ಮತ್ತು ಯಾರಿಗೂ ಬೇಡಾದವರ ಮುಖಾಂತರ. ಆದರೆ ಎಷ್ಟೋ ಸಾರಿ ನಾವು ಇಂತಹ ಶ್ರೇಷ್ಠ ಕೆಲಸಗಳನ್ನು ಮಾಡದೆ ಮಾನವನ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತೇವೆ.

ಧರ್ಮದ ಹೆಸರಿನಲ್ಲಿ ಹಿಂಸೆಪಡುವವರನ್ನು ತುಂಬಾ ನೋಡಿದ್ದೇವೆ. ಆದರೆ ನಿಜವಾಗಿ ಧರ್ಮವನ್ನು ಅನುಸರಿಸುವವನು ಹಿಂಸೆಯನ್ನು ವೈರತ್ವದ ಸಾಧನವೆಂದು ಭಾವಿಸುವುದಿಲ್ಲ. ಭಾವಿಸಿದ್ದೇಯಾದಲ್ಲಿ ಆ ವ್ಯಕ್ತಿ ತನ್ನ ಧರ್ಮಕ್ಕೆ ಭಯಾನಕ ಕೇಡನ್ನು ಬಗೆದ ಹಾಗೆ.

ಕಾಯಕದ ಸನ್ನಿವೇಶ, ಸಂದರ್ಭದ ಸಮಯವಿದು. ಈವತ್ತು ಮಾತಿಗೆ ಬೆಲೆಯಿಲ್ಲದ್ದಾಗಿದೆ. ಬಾಯ್ಮಾತಿನಿಂದ ನಾವು ಸಹೋದರ(ರಿ)ಯರೆಂದು ಭಾವಿಸಿದಂತೆ ಘೋಷಿಸುವ ಬದಲಾಗಿ ಯೇಸುಕ್ರಿಸ್ತರು ಬೋಧಿಸಿದಂತೆ ಲೆಕ್ಕಕ್ಕೂ ಮೀರಿ ತನ್ನನ್ನು ಪ್ರೀತಿಸಿಕೊಳ್ಳುವಂತೆ ಬೇರೆಯವರನ್ನೂ ಪ್ರೀತಿಸ ಬೇಕಾಗಿದೆ.

ಈ ಉದ್ದೇಶದಿಂದ ಹೂವಿನಹಡಗಲಿ ಕಾರ್ಮೆಲ್ ಸಭೆಯ ಸನ್ಯಾಸಿಗಳು ಬಂದಾಗ ಜನ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಮುಸ್ಲಿಂ ಭಾಂದವರೊಬ್ಬರು ನಮ್ಮಲ್ಲಿ ಬಹಳವಾಗಿ ಬೆರೆತರೆ, ಗೌಡ ಕುಟುಂಬದವರೊಬ್ಬರು ತಮ್ಮ ಮನೆಯಲ್ಲಿ ನೆಲೆಕೊಟ್ಟರು. ಬ್ರಾಹ್ಮಣ ಕುಟುಂಬದವರೊಬ್ಬರು ಉಟೋಪಚಾರ ನೆರವು ಮಾಡಿದ್ದನ್ನ ನೋಡಿದರೆ ಹಡಗಲಿ ಜನಸಮುದಾಯಕ್ಕೆ ನಾವು ಚಿರಋಣಿಗಳು. 'ವೈವಿಧ್ಯತೆಯಲ್ಲಿ ಏಕತೆ' ಎಂಬಂತೆ ವಿವಿಧ ಭಾಷೆಯ, ಸಂಸ್ಕೃತಿಯ ಜನರ ತಂಗುದಾಣ ಊರಾಗಿರುವ ಹಡಗಲಿ ಜನತೆಯು ಗೌರವಾನ್ವಿತರು. ಇದನ್ನು ಉಳಿಸಿ ಬೆಳೆಸಲು ಪ್ರಯತ್ನಿಸೋಣ. ಜಾತಿ, ಮತ, ಭೇದಭಾವವಿಲ್ಲದೆ ಒಂದಾಗಿ, ಅನ್ಯೋನ್ಯತೆಯಿಂದ ಬಾಳುವ ಇವರ ಅಭಿವೃದ್ಧಿಗಾಗಿ ದುಡಿಯಲು ಪ್ರಯತ್ನಿಸೋಣ.

'ಕಾಯಕವೇ ಕೈಲಾಸ'ವೆಂಬಂತೆ, ಸಮಯ, ಸನ್ನಿವೇಶಕ್ಕನುಸಾರವಾಗಿ, ಬೇರೆಯವರ ಒಳಿತನ್ನು ಬಯಸಿ, ಸಮಾಜದ ಬದಲಾವಣೆಗಳನ್ನು ಗಮನದಲ್ಲಿರಿಸಿಕೊಂಡು, ಜನರಿಗೆ ತಿಳುವಳಿಕೆ, ತರಬೇತಿ ಕೊಡುವುದರ ಮೂಲಕ, ಬೇರೆಯವರ ಮೇಲೆ ದಬ್ಬಾಳಿಕೆ ನಡೆಸುವ ಬದಲಾಗಿ, ಶಾಂತಿ, ಪ್ರೀತಿ, ಅನ್ಯೋನ್ಯತೆ, ಸಮಾನತೆಯಿಂದ ಬಾಳಲು ನಮ್ಮ ಒಳಿತನ್ನು ಮರೆತು ಬೇರೆಯವರ ಒಳಿತಿಗಾಗಿ ಧೈರ್ಯದಿಂದ ದುಡಿಯಲು ಪ್ರಯತ್ನಿಸೋಣ.

ಈ ಉದ್ದೇಶವನ್ನು ಗಮನದಲ್ಲಿರಿಸಿಕೊಂಡು ಮಿತಿ ಮೀರಿ (ಲೆಕ್ಕಕ್ಕೂ ಮಿಗಿಲಾಗಿ) ವಿವಿಧ ಯೋಜನೆಗಳನ್ನೂ ಚಟುವಟಿಕೆಗಳನ್ನೂ ಹಮ್ಮಿಕೊಂಡಿದ್ದೇವೆ. ಉದಾ: ಮಹಿಳೆಯರಿಗೆ ಹೊಲಿಗೆ ಯಂತ್ರದ ತರಬೇತಿ, ಯುವಕ ಮತ್ತು ಯುವತಿಯರಿಗೆ ಗಣಕಯಂತ್ರದ ತರಬೇತಿ, ಶಾಲಾ ಮಕ್ಕಳಿಗೆ ಮತ್ತು ಓದುವುದರಲ್ಲಿ ಹಿಂದುಳಿದವರಿಗೆ ತರಬೇತಿ, ಬಡ ವಿದ್ಯಾರ್ಥಿಗಳಿಗೆ ಸಮವಸ್ತ್ರ ಪುಸ್ತಕ, ಉಚಿತ ವಿದ್ಯಾರ್ಥಿ ನಿಲಯ, ನಿರುದ್ಯೋಗಿಗಳಿಗೆ ಚಾಲನಾ ತರಬೇತಿ ಶಾಲೆ, ಇವೇ ಮುಂತಾದ ಕಾರ್ಯ, ಚಟುವಟಿಕೆಗಳು ಲೆಕ್ಕಕ್ಕೆ ಮೀರಿ ಸೇವೆ ಮಾಡುವ ಕೆಲವು ರೂಪರೇಷೆಗಳು.

ಇದನ್ನೆಲ್ಲಾ ನೋಡುವಾಗ ನನಗೆ ಬಹಳ ಸಂತೋಷ ವಾಗುತ್ತಿದೆ. ಕಾರಣ ಹಡಗಲಿಯ ಅನೇಕ ಯುವಕ-ಯುವತಿಯರು ಮತ್ತು ಪಕ್ಕದ ಗ್ರಾಮಸ್ಥರು ಹೊಸ ನೀತಿ (ರೀತಿ)ಯ ಜೀವನದ ಅನುಭವ ಪಡೆಯುತ್ತಾ ಇದ್ದಾರೆ. ಇವರೆಲ್ಲಾ ಬೇರೆಯವರಿಂದ ಧಾರಳವಾಗಿ ಪಡೆದುಕೊಂಡಿ ದ್ದಾರೆ. ಇನ್ನು ಮುಂದೆ ಹಡಗಲಿಯ ಪ್ರತಿಯೊಬ್ಬ ಯುವಕ(ತಿ) ನಾನು ಪಡೆದ ಪ್ರಯೋಜನವನ್ನು ತನಗಾಗಿ ಬಳಸಿಕೊಳ್ಳದೆ ಸಮಾಜದ ಅಭಿವೃದ್ಧಿ ಮತ್ತು ಸಮಾಜದ ಬದಲಾವಣೆಗೆ ಅವಿರತವಾಗಿ ಶ್ರಮಿಸಲು ಪಣತೊಡುತ್ತಾರೆ ಎಂಬ ನಂಬಿಕೆ ನನ್ನಲ್ಲಿದೆ.

ಶುಭ ಕಾಮನೆಗಳೊಂದಿಗೆ,

ಫಾ।। ಜೊ ತಾವ್ರೊ,
ಪ್ರಾಂತ್ಯಾಧಿಕಾರಿ
ಕರ್ನಾಟಕ - ಗೋವಾ

Scanned by CamScanner

# CARMEL SEVA SADAN



**Serve without Counting the Cost ........**

'Janara Seveye Janardhana Sêve, Parara Seveye Paramatmana Seve' are the fundamental teachings of Jesus. Many times we can make a mistake in believing that we worship God, because we do the puja and rituals well. But we never know if God is really pleased with us.

The desire to serve others precisely cōmes from looking at other persons not as things and objects but as Paramatma Sanidhya. God comes to visit us especially in the form of the poor, the socially outcast, the helpless and the unwanted. So many times we end up doing a great disservice to the humanity, by such wrong attitudes of violence in the name of religions. But those who really practice a religion do not use it as instrument of hatred. If one does, it is a gross misuse and that person does great harm to that religion.

Time has come for action. Words today have little worth. It matters not, merely to proclaim we are brothers, but as Jesus said, love each other as I have loved you, namely without counting the cost.

Our Carmelite friars arrived at Huvinahadagali in 1998, to serve the people without counting the cost. The people welcomed us. A Muslim found us a home, a Gauda family received us in a part of their house, a Brahmin brought us food and drink. We salute the people of Hadagali for their high culture and sense of respect for the human person. Let us safeguard this treasure of friendship and fellow feeling. Here all people of various religions, castes and colours live in peace and fraternity harmony.

It is time we move ahead and begin to work for the good of each other. Let us take care of others and we will be taken care of by them. We will slowly change the face of the society. We will teach people that we can all live in peace and amity if we do not want to dominate over others, but go on courageously working for the less fortunate than ourselves.

The efforts at tailoring for women, computer for the youth, tuition for those who did not have the possibility of having the dignity of a educated person, giving scholarship for the poor deserving school children, free boarding for the poor youth of the villages and vehicle driving for the unemployed youth are just efforts to serve others without counting the cost.

So it has been my joy to see so many children and the youth from Hadagali and neighboring villages experiencing a new level of life. They have received generously, because others did not count the cost of service. Now it is the turn of Hadagali youth to serve the society without counting the cost.

Best wishes,

**Fr. Joe Tauro** ocd
*Provincial*

Scanned by CamScanner



Room No 212
Bangalore – 560 001
Ph.: 080-2209212
Hadagali (08399) 20855
Nandihali 74052080 22

Dated: 14-3-2003

**Nandihalli Halappa,** B.Com.
M. L. A.
Hoovinahadagali Area
Bellary Dist.

# *Message*

Within a short duration and with an attractive front page, you have brought out your first souvenir. This shows your capacity to accept everyone along with the interest and love you have for all.

Right from the beginning, all the projects that you have undertaken to help the economically poor society has certainly reduced their burden. I am an eye-witness to your generous gestures of providing books and uniforms, teaching tailoring specially for women, conducting medical camps and starting driving school.

Years back this property was nothing more than a barren land, but today it has assumed progressive structures. Besides this, the Church invites everyone who passes by to have an experience of the Prince of Peace. Your interest, solidarity and commitment to your assigned task are remarkably appreciated. I wish you all the best in your future endeavours.

**Nandihalli Halappa**

Scanned by CamScanner




**ನಂದಿಹಳ್ಳಿ ಹಾಲಪ್ಪ** ಬಿ.ಕಾಂ.
ಶಾಸಕರು
ಹೂವಿನಹಡಗಲಿ ಮತ ಕ್ಷೇತ್ರ
ಬಳ್ಳಾರಿ ಜಿಲ್ಲೆ



ಶಾಸಕರ ಭವನ, ಕೊಠಡಿ ಸಂಖ್ಯೆ–212
ಬೆಂಗಳೂರು–560001
ದೂರವಾಣಿ: 080–2209212
ಹಡಗಲಿ –20855 (08399)
ನಂದಿಹಳ್ಳಿ–74052


ದಿನಾಂಕ: 14–3–03

# ಸಂದೇಶ


ತಮ್ಮ ವಾರ್ಷಿಕ ಸಂಚಿಕೆಯನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಅತ್ಯಾಕರ್ಷಕ ಮುಖಪುಟದೊಂದಿಗೆ ದಿವ್ಯ ಸರ್ವಧರ್ಮೀಯ ಸೇವೆಯೊಂದಿಗೆ ಹೊರತರುತ್ತಿರುವುದು ಸರ್ವಧರ್ಮೀಯರನ್ನು ಅಪ್ಪಿಕೊಳ್ಳುವ, ಒಪ್ಪಿಕೊಳ್ಳುವ ವಿಶಾಲ ಸಹೃದಯವಂತಿಕೆ ತಮ್ಮದಾಗಿದೆ.

ಪ್ರಾರಂಭದಲ್ಲಿ ನನ್ನನ್ನು ಆಮಂತ್ರಿಸಿ ತಮ್ಮ ಸಮಾಜಸೇವೆ, ಧಾರ್ಮಿಕ ಸಹಿಷ್ಣುತೆ, ಸಾಮಾಜಿಕ ಕಳಕಳಿ, ಸಾಮಾಜಿಕ ಶಿಕ್ಷಣ, ಎಲ್ಲಾ ವರ್ಗದ, ಎಲ್ಲಾ ಜಾತಿಯ ಧರ್ಮದವರಿಗಾಗಿ ಅವರ ಆರ್ಥಿಕತೆಯಿಂದ ಮೇಲಕ್ಕೆತ್ತಲು ಕಾರ್ಮೆಲ್ ಸೇವಾಸದನದ ಮೂಲಕ ಮಹಿಳೆಯರಿಗೆ, ಹೊಲಿಗೆ ತರಬೇತಿ ಕೇಂದ್ರ, ಮಕ್ಕಳಿಗೆ ವಸತಿ ನಿಲಯ, ಪಠ್ಯಪುಸ್ತಕ, ಆರೋಗ್ಯ ಇನ್ನಿತರ ತಮ್ಮ ಸಂಸ್ಥೆಯ ಕಾರ್ಯಚಟುವಟಿಕೆಗಳು ನನ್ನ ಕ್ಷೇತ್ರದ ಆಯಾ ಮೂಲೆ ಹಳ್ಳಿಗಳಲ್ಲಿ ಪ್ರಾರಂಭವಾಗಿರುವುದು, ಅವುಗಳಲ್ಲಿ ಕೆಲವು ಉದ್ಘಾಟನೆ ನನ್ನಿಂದಾಗಿರುವುದು. ತಾವು, ತಮ್ಮ ಸಂಸ್ಥೆ ನನ್ನ ಮೇಲೆ ಇಟ್ಟಂತಹ ಅಪಾರ ಪ್ರೀತಿ, ವಿಶ್ವಾಸದ್ಯೋತಕವಾಗಿ ಈ ನನ್ನ ಬರಹ ತಮ್ಮ ಸಂಚಿಕೆಯಲ್ಲಿ ಸೇರಲಿರುವುದು ನಮ್ಮಿಬ್ಬರ ಸವಿನೆನಪಿನ ಹೆಜ್ಜಾಗುರುತಾಗಿದೆ.

ಬೆಂಗಾಡಾಗಿದ್ದ ಈ ನೆಲ ಇಂದು ಪ್ರಶಾಂತವಾದ ಶಾಂತಿದೂತನ ದೇವಾಲಯ. ದಾರಿಹೋಕರೆಲ್ಲರೂ ಅತ್ತ ಗಮನ ಹರಿಸದಿರಲಾರರು. ತಮ್ಮ ಶಾಂತಿ, ಸಹನೆ, ಸಹಬಾಳ್ವೆ, ಸಹಧರ್ಮ, ಸದಾ ಮುಂದುವರಿಯಲೆಂದು ಹಾರೈಸುತ್ತೇನೆ.

ನಂದಿಹಳ್ಳಿ ಹಾಲಪ್ಪ

Scanned by CamScanner



PAX CHRISTI

ಯೇಸುಬಾಲರ ದೇವಾಲಯ
ಹೂವಿನ ಹಡಗಲಿ – 583 219
ಬಳ್ಳಾರಿ ಜಿಲ್ಲೆ
ಕರ್ನಾಟಕ, ಭಾರತ

ದೂರವಾಣಿ: 20647 (08399)

# ಸಂದೇಶ


ಕಾರ್ಮೆಲ್ ಸೇವಾಸದನ ಒಂದು ಸಮಾಜಸೇವಾ ಕೇಂದ್ರ. ಈ ಸಂಸ್ಥೆ ಅನೇಕ ಸಮಾಜಸೇವೆ ಹಾಗೂ ಅಭಿವೃದ್ಧಿತ ಸೇವಾಕಾರ್ಯಗಳನ್ನು ಒಳಗೊಂಡಿರುವುದು ನಿಜವಾಗಿ ಹಡಗಲಿ ಜನತೆಗೆ ಒಂದು ಸಂತೋಷದ ವಾತಾವರಣ. ಹೊಸದಾಗಿ ಪ್ರಾರಂಭವಾದ ಈ ಸಂಸ್ಥೆ ಬೆಳೆಯಬೇಕಾದರೆ ನಮ್ಮ ಪ್ರತಿಯೊಬ್ಬರ ಸಹಕಾರ ಮತ್ತು ಸೇವೆ ಬಹಳವಾಗಿ ಬೇಕಾಗಿದೆ.

ಈ ಕಾರ್ಮೆಲ್ ಸೇವಾಸದನ ತನ್ನ ಒಂದು ವರ್ಷದ ಸೇವಾಕಾರ್ಯ ಸಂಚಿಕೆಯನ್ನು ಹೊರ ತರುತ್ತಿರುವ ಶುಭಸಂದರ್ಭದಲ್ಲಿ ಹಡಗಲಿ ಬಾಲಯೇಸುವಿನ ದೇವಾಲಯ ಹಾಗೂ ಕ್ರೈಸ್ತ ಭಕ್ತರ ಪರವಾಗಿ ಶುಭಾಶಯಗಳನ್ನು ತಿಳಿಯಲಿಚ್ಚಿಸುತ್ತೇನೆ.

ಒಂದು ಚಿಕ್ಕ ಮೊಳಕೆಯಂತೆ ಹುಟ್ಟಿ ಬೆಳೆಯುತ್ತಿರುವ ಈ ಕಾರ್ಮೆಲ್ ಸೇವಾ ಕೇಂದ್ರವು ಹೆಮ್ಮರವಾಗಿ ಬೆಳೆಯಲಿ. ಎಲ್ಲಾ ಜಾತಿ, ವರ್ಗ ಹಾಗೂ ಧರ್ಮದ ಜನರು ಇದರ ಸದುಪಯೋಗವನ್ನು ಪಡೆದು ಈ ಕಾರ್ಮೆಲ್ ಸೇವಾಸದನದ ಮುಖಾಂತರ ಪರಮಾತ್ಮನ ಪ್ರೀತಿ ಮತ್ತು ಸೇವೆ ಸರ್ವರಿಗೂ ಲಭಿಸಲಿ ಎಂದು ಹಾರೈಸುತ್ತೇನೆ.

ಫಾ। ಹೆನ್ರಿ ಮೋರಾಸ್
ಧರ್ಮಗುರು

Scanned by CamScanner



Fr. Henry Moras
*Parish Priest*

PAX CHRISTI

**INFANT JESUS CHURCH**
CARMELITE FATHERS
Huvinahadagali-583219
Bellary Dist.
Karnataka, India

Ph: (08399) 20647

# *Message*

Carmel Seva Sadan is a social welfare center. In aid of the people of Hadagali, it undertakes many enterprises. I am sure that the sincere effort of the staff and the concerned people of this welfare center has already brought in joy along with a ray of future hope.

The center certainly needs encouragement and support and on this occasion, as it releases the first souvenir, together with the Parish of the Infant Jesus and all the faithful, I wish and pray all the best and every success.

Let this center, which is now just in the form of a seedling grow yielding abundant fruit. Let everyone without discrimination of caste, colour and religion benefit from this welfare center so that a healthy atmosphere of love and friendship is created.

(Fr. Henry Moras)

Scanned by CamScanner

# GLIMPSES

# INTO THE HISTORY OF HUVINAHADAGALI PROJECT

It all started with the clarion call given by one Lord Jesus to love and serve one's fellow human beings. So followed out great men and women in the past centuries who found meaning for their lives precisely in laying down their lives, so that others may have it in abundance.

So also the International of the Discalsed Carmelites Order sent their eminent men in the territory of coastal and interior Karnataka even in the times of Vijayanagara Kingdom. Rev. Fr. Leonardo from Spain came to the court of Adil Shah in Bijapur as a part of the official delegation of Portuguese Viceroy in Goa. Eventually the area of Bijapur and surrounding areas were of concern to the Carmelites even in early 17th century. Their presence and activity in favour of local people in Karwar, Belgaum and Shimoga have been well documented.

True to the inspiration of their predecessors, the bishop of Bellary, Most Rev. Joseph D'Silva, requested the Discalsed Carmelites of the Karnataka-Goa province, to take up socio developmental activities in the taluk of Huvina-Hadagali. It is said that Mr. M.P. Prakash, the then Local MLA had mentioned to the bishop for the need of taking up developmental work in this back-ward Taluka. The Taluka has around 120 big and small villages situated on the right bank of river Tunga-badra, leading to the ancient Hampi, the seat of Kannada Culture. The main villages are Sogi, Uttanghi, Ittigi, Kenchammanahalli, Nandi halli, Mahajanadahalli, Holagundi, Hirehadagali, Timlapura, Naveli, Magala, Dasanahalli, Holalu, Talkal, Govindpura Tanda, Varakanahalli, Mudenur, Kombala, Sovanahalli, Birabbi, Mylara. The population of the taluka is 1,80,584 spread in an area of 99,592 hectares. The main social classifications among the population are the Reddys, Lingayats, Valmiki Naikas, Lambanis, Moslems and Christians.

Scanned by CamScanner

The pioneers stayed for a month at H.Bommanahalli and came to Hadagali to look for a house. It was not easy to find a house on rent for a stranger. It was Mr. Kammar, professor who welcomed us and put us in touch with Mr. Ananth Bhandari who intervened in our favour with Mr. Subbanna to rent to us his vacant house.

On 17th July 1998 Fr. Henry Moras accompanied by Br. Joachim Rodrigues came to reside in the town formally. The Bishop of Bellary celebrated the inaugural Mass with the presence of about 100 local people, and a sumptuous meal was arranged for all.

It is in this house that each day the children gathered for study, tuition, to play and to pray. Initiatives were taken, to help build a few homes for the poor. The hunt was on to find a land that could be the centre for our social activities in Hadagali. After a long search M. Panchakshari Gauda offered his land on the Sogi Road, on a good deal. It was Rev. Fr. Lawrence D'Mello who paid for acquiring this 7 acre plot.

Soon architect Mr. S.J. Antony of Bangalore drew the plan for a decent and compact residence along with a prayer hall, orphanage, computer hall and a tailoring school. The foundation stone was laid on 4th of August by the Provincial, in the presence of the local people. The masons of the building were Mr. Socor and Mr. Ismail. The Bishop of Bellary inaugurated it on 25th of January 2002 in a solemn function in the presence of some 1,000 people. Also the Swamiji of the local mutt Gavisiddeswara came to and was received in the new building with traditional honours by the Provincial and Fr. Henry. In the inaugural function the local MLA-Nandihalli Halappa and Tahsildar who welcomed the Carmelite presence and activities among them.


After studying in depth we discovered the special situation that the priority for social development is the quality education of children especially the girl offering free education to deserving Intelligent boys, empowering the women by teaching them some self-employment trade; helping the school drop outs to attempt SSLC exams, offering tuition possibility for those finding hardship in studies, possibility to learn computer

Scanned by CamScanner

systematically, conducting Medical camps for health awareness, schemes for unemployed youth to learn some trade or vehicle driving and repair etc., some house repair schemes for the poor, youth sports, cricket tournament for the youth, talents day for the children etc.

With these begins the second phase of the developmental activity and hence young and energetic men join the team. Br. Joachim moves out and Bro. Victor Pais, Selva D. and Ligoury Crasta followed each other in animating the activities. Fr. Nelson Pinto came over and gained the hearts of the youth. Then in June 2002 came Fr. William Miranda to give the necessary systematic coordination of all these projecta and activities so that all of them are geared for the benefit of the poorest of the poor of this Taluka. The signs of social transformation is already visible in these areas for those interested to know them.

*Compiled by* **Christa Raj**
Hadagali




Scanned by CamScanner

# ಪ್ರಗತಿ ಪಥದತ್ತ ಹೂವಿನ ಹಡಗಲಿ

ಜನಸೇವೆಯೇ ಜನಾರ್ಧನನ ಸೇವೆ. ''ನಿಮ್ಮ ನೆರೆಹೊರೆಯವರನ್ನು ಪ್ರೀತಿಸಿ'' ಎಂಬ ಯೇಸುಕ್ರಿಸ್ತರ ಆದೇಶದಡಿ ಅನೇಕ ಮಹಾನ್ ವ್ಯಕ್ತಿಗಳು ಇತರರ ಏಳಿಗೆಗಾಗಿ ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟಿದ್ದಾರೆ. ತನ್ನ ಸ್ವಾರ್ಥವನ್ನು ಲೆಕ್ಕಿಸದೆ ಇತರರ ಅಭಿವೃದ್ಧಿಗಾಗಿ ತನ್ನ ಜೀವನವನ್ನು ಮೀಸಲಾಗಿಡುವ ಮುಖಾಂತರ ತಮ್ಮ ಜೀವನಕ್ಕೆ ಹೊಸ ಅರ್ಥವನ್ನು ಕಂಡುಕೊಂಡಿದ್ದಾರೆ. ಇದೇ ಆಗಿದೆ ಅಂತರಾಷ್ಟ್ರೀಯ ಕಾರ್ಮೆಲ್ ಸಭೆಯ ಸಂಪ್ರದಾಯ.

ವಿಜಯನಗರ ಸಾಮ್ರಾಜ್ಯದ ಆಡಳಿತಾವಧಿ ಯಲ್ಲಿಯೇ ಕಾರ್ಮೆಲ್ ಸಭೆಯು ಕರ್ನಾಟಕದ ಕರಾವಳಿ ಹಾಗೂ ಒಳನಾಡಿನ ಪ್ರದೇಶಗಳ ಜನರ ಅಭಿವೃದ್ಧಿಗಾಗಿ ತನ್ನ ಸದಸ್ಯರನ್ನು ಕಳುಹಿಸಿತು. ಸ್ಪೇನ್ ದೇಶದ ಗುರು ಲಿಯೋನಾರ್ಡೋರವರು ಗೋವಾದ ಪೋರ್ಚುಗೀಸ್ ವೈಸರಾಯ್‌ಯಾಗಿ ಬಿಜಾಪುರದ ಆದಿಲ್ ಶಾನ ಆಸ್ಥಾನಕ್ಕೆ ಭೇಟಿ ನೀಡಿದ್ದರು. ಕಾಲಕ್ರಮೇಣ ಅಂದರೆ ಹದಿನೇಳನೇ ಶತಮಾನದ ಆರಂಭದಲ್ಲಿಯೇ ಬಿಜಾಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಕಾರ್ಮೆಲ್ ಸಭೆಯವರಿಗೆ ನೆಚ್ಚಿನದಾದವು. ಕಾರವಾರ, ಬೆಳಗಾಂ ಹಾಗೂ ಶಿವಮೊಗ್ಗಾ ಪ್ರದೇಶಗಳಲ್ಲಿ ಇವರ ಅಸ್ತಿತ್ವ ಹಾಗೂ ಜನಾಭಿವೃದ್ಧಿ ಚಟುವಟಿಕೆಗಳು ಕ್ರೋಢೀಕೃತಗೊಂಡಿವೆ.

ಕರ್ನಾಟಕ – ಗೋವಾ ಪ್ರಾಂತ್ಯದ ಕಾರ್ಮೆಲ್ ಸಭೆಯು ಈ ಜನತಾ ಸೇವೆಯನ್ನು ಅರಿತ ಬಳ್ಳಾರಿ ಧರ್ಮಪ್ರಾಂತ್ಯದ ಧರ್ಮಾಧ್ಯಕ್ಷ ಅತೀ ವಂದನೀಯ ಜೋಸೆಫ್ ಡಿ'ಸಿಲ್ವಾರವರು ತನ್ನ ಧರ್ಮಕ್ಷೇತ್ರದ ಹೂವಿನ ಹಡಗಲಿ ಎಂಬ ತಾಲ್ಲೂಕಿನಲ್ಲಿ ಸಮಾಜ ಅಭಿ ವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳುವಂತೆ ಅವರನ್ನು ವಿನಂತಿಸಿಕೊಂಡರು. ಈ ಹಿಂದುಳಿದ ತಾಲೂಕಿನ ಅಭಿವೃದ್ಧಿಯ ಬಗ್ಗೆ ಆ ಮೊದಲೇ ಮಾಜಿ ಶಾಸಕ ಶ್ರೀ ಎಮ್. ಪಿ. ಪ್ರಕಾಶ್‌ರವರು ಧರ್ಮಾಧ್ಯಕ್ಷರ ಮನ ಸೆಳೆದಿದ್ದರು.

ಹೂವಿನ ಹಡಗಲಿ ತಾಲ್ಲೂಕು ಸುಮಾರು ನೂರ ಇಪ್ಪತ್ತು ಸಣ್ಣ ಹಾಗೂ ದೊಡ್ಡ ಹಳ್ಳಿಗಳನ್ನೊಳಗೊಂಡಿದೆ. ಇದು ತುಂಗಾಭದ್ರ ನದಿ ದಡದಲ್ಲಿದ್ದು ಕರ್ನಾಟಕ ಸಂಸ್ಕೃತಿಯ ತವರೂರಾದ ಹಂಪಿಯ ಸಮೀಪದಲ್ಲಿದೆ. ಈ ತಾಲ್ಲೂಕಿನ ಪರಿಧಿಯಲ್ಲಿರುವ ಪ್ರಮುಖ ಹಳ್ಳಿಗಳೆಂದರೆ, ಸೋಗಿ, ಉತ್ತಂಗಿ, ಇಟ್ಟಿಗಿ, ಕೆಂಚಮ್ಮನಹಳ್ಳಿ, ನಂದಿಹಳ್ಳಿ, ಮಹಾಜನದ ಹಳ್ಳಿ, ಹೊಳಗುಂದಿ, ಹಿರೇ ಹಡಗಲಿ, ತಿಮುಲಾಪುರ, ನವೇಲಿ, ಮಾಗಳ, ದಾಸನಹಳ್ಳಿ, ಹೊಳಲು, ತಲಕಲ್, ಗೋವಿಂದಪುರ ತಾಂಡ, ವರಕನಹಳ್ಳಿ, ಮುದೆನೂರು, ಕೊಂಬಳ, ಸೋಮನ ಹಳ್ಳಿ, ಬಿರಬ್ಬಿ, ಮೈಲಾರ ಇತ್ಯಾದಿ. 99592 ಹೆಕ್ಟೇರ್ ವಿಸ್ತಾರವಿರುವ ಈ ತಾಲ್ಲೂಕಿನ ಜನಸಂಖ್ಯೆ ಸುಮಾರು 1,80,584. ಇಲ್ಲಿಯ ಪ್ರಮುಖ ಸಾಮಾಜಿಕ ಪಂಗಡ ಗಳೆಂದರೆ ರೆಡ್ಡಿ, ಲಿಂಗಾಯತ, ವಾಲ್ಮೀಕಿ, ನಾಯಕ್, ಲಾಂಬಾನಿ, ಮುಸ್ಲಿಂ ಹಾಗೂ ಕ್ರೈಸ್ತರು. ಆರ್ಥಿಕ ಹಾಗೂ ಶೈಕ್ಷಣಿಕ ಮಟ್ಟದಲ್ಲಿ ಹಿಂದುಳಿದಿದೆ.

ಹೂವಿನ ಹಡಗಲಿ ಸರ್ವತೋಮುಖ ಅಭಿವೃದ್ಧಿಯ ಕನಸನ್ನು ನನಸಾಗಿಸಲು ಮೊದಲಿಗೆ ಬಂದ ಗುರುಗಳಿಗೆ ವಾಸಮಾಡಲು ತಕ್ಕುದಾದ ಮನೆಯಿಲ್ಲದೆ ಅಲ್ಲಿ ಇಲ್ಲಿ ಅಲೆದಾಡಬೇಕಾಯಿತು. ಒಂದು ತಿಂಗಳ ತನಕ ಹಗರಿ ಬೊಮ್ಮನಹಳ್ಳಿಯಲ್ಲಿ ತಂಗಿದ್ದ ಇವರು ಬಾಡಿಗೆ ಮನೆಯೊಂದನ್ನು ಹುಡುಕಲು ಹಡಗಲಿಗೆ ತಲುಪಿದರು. ಬಾಡಿಗೆ ಮನೆ ಅರಸಿ ದೊರಕುವುದು ಅದೂ ಅಪರಿಚಿತರಿಗೆ ಅಷ್ಟು ಸುಲಭದ ಮಾತಲ್ಲ, ಮೊದಲಿಗೆ ಪ್ರಾಧ್ಯಾಪಕ ಶ್ರೀ ಕಮ್ಮಾರ್, ಬಿ.ಎಸ್.ರವರು ಇವರನ್ನು ಸ್ವಾಗತಿಸಿ ಶ್ರೀ ಅನಂತ ಭಂಡಾರಿಯನ್ನು ಪರಿಚಯಿಸಿದರು. ಇವರು ಶ್ರೀ ಸುಬ್ಬಣ್ಣರವರನ್ನು ಮಾತನಾಡಿಸಿ ಅವರ ಖಾಲಿ ಮನೆಯನ್ನು ಇವರಿಗೆ ನೀಡುವಲ್ಲಿ ಸಫಲರಾದರು.

Scanned by CamScanner

1998ರ ಜುಲೈ 17ರಂದು ಸ್ವಾಮಿ ಹೆನ್ರಿ ಮೊರಾಸ್ ಹಾಗೂ ಸಹೋದರ ಜೋಕಿಂ ರೊಡ್ರಿಗಸ್‌ರವರು ಅಧಿಕೃತವಾಗಿ ಹಡಗಲಿಯಲ್ಲಿ ವಾಸಮಾಡಲು ಪ್ರಾರಂಭಿಸಿದರು. ಬಳ್ಳಾರಿ ಧರ್ಮಪ್ರಾಂತ್ಯದ ಧರ್ಮಾಧ್ಯಕ್ಷರು ಸುಮಾರು ನೂರು ಜನರ ಸಮಕ್ಷಮದಲ್ಲಿ ಪವಿತ್ರ ಬಲಿಪೂಜೆಯನ್ನು ಅರ್ಪಿಸಿ ಈ ಶುಭಕಾರ್ಯಕ್ಕೆ ಮಂಗಳ ಹಾಡಿದರು. ಸ್ಥಳೀಯ ಜನರೇ ಹಾಜರಿದ್ದವರಿಗೆ ರಸದೌತಣವನ್ನು ಬಡಿಸಿದರು.

ಇದೇ ಮನೆಯಲ್ಲಿ ಸುತ್ತಮುತ್ತಲ ಮಕ್ಕಳು ಪಾಠಕಲಿಯಲು, ಆಟ ಪ್ರಾರ್ಥನೆಗಾಗಿ ಒಟ್ಟು ಸೇರ ತೊಡಗಿದರು. ಈ ಬಾಡಿಗೆ ಮನೆಯಿಂದಲೇ ಬಡಜನರಿಗಾಗಿ ವಸತಿ ಸೌಕರ್ಯಗಳನ್ನು ಕಲ್ಪಿಸಲು, ಮನೆಗಳನ್ನು ನಿರ್ಮಿಸಿಕೊಡುವ ಕೆಲಸವನ್ನು ಕೈಗೆತ್ತಿ ಕೊಳ್ಳಲಾಯಿತು. ಈ ಎಲ್ಲಾ ಕೆಲಸಕಾರ್ಯಗಳು ಸುಸೂತ್ರವಾಗಿ ನಡೆಯಲು ಹೂವಿನ ಹಡಗಲಿಯಲ್ಲಿ ಒಂದು ಕೇಂದ್ರವನ್ನು ಸ್ಥಾಪಿಸುವುದಕ್ಕಾಗಿ ಸ್ಥಳದ ಹುಡುಕಾಟ ಪ್ರಾರಂಭವಾಯಿತು. ಶ್ರಮಭರಿತ ಹುಡುಕಾಟದ ಕೊನೆಗೆ ಶ್ರೀ ಪಂಚಾಕ್ಷರಿ ಗೌಡರು ಸೋಗಿ ರಸ್ತೆಯ ಬದಿಯಲ್ಲಿರುವ ತಮ್ಮ ಏಳು ಎಕರೆ ಜಮೀನನ್ನು ನೀಡಲು ಒಪ್ಪಿಕೊಂಡರು. ಹಿಂದಿನ ಕರ್ನಾಟಕ–ಗೋವಾ ಪ್ರಾಂತ್ಯಾಧಿಕಾರಿ ವಂದನೀಯ ಗುರು ಲಾರೆನ್ಸ್ ಡಿ'ಮೆಲ್ಲೊರವರು ಖರೀದಿಸಲು ಸಹಕಾರಿಯಾದರು.

ಕಾಲ ವ್ಯಯಮಾಡದೆ ಒಂದು ವಸತಿ, ಪ್ರಾರ್ಥನಾ ಮಂದಿರ, ಅನಾಥಾಶ್ರಮ, ಕಂಪ್ಯೂಟರ್ ಹಾಗೂ ಹೊಲಿಗೆ ತರಬೇತಿ ಕೇಂದ್ರವನ್ನು ತೆರೆಯುವ ಯೋಜನೆಗೆ ಬೆಂಗಳೂರಿನ ವಾಸ್ತುಶಿಲ್ಪ ಶ್ರೀ ಎಸ್. ಜೆ. ಅಂತೋನಿ–ಯವರು ರೂಪುರೇಶಗಳನ್ನು ಸಿದ್ಧಪಡಿಸಿದರು. ಈ ಬಹುಪಯೋಗಿ ಕಟ್ಟಡಕ್ಕೆ ಪ್ರಾಂತ್ಯಾಧಿಕಾರಿಯವರು, ಹಾಜರಿದ್ದ ಸ್ಥಳೀಯರ ಸಮ್ಮುಖದಲ್ಲಿ ಅಡಿಗಲ್ಲನ್ನು ಹಾಕಿದರು. ಕಟ್ಟಡ ಕಾರ್ಯವನ್ನು ಸಂಪೂರ್ಣತೆಗೆ ತರುವಲ್ಲಿ ಶ್ರೀ ಸುಕೋರ್ ಹಾಗೂ ಶ್ರೀ ಇಸ್ಮಾಯಿಲ್‌ರವರು ಹೆಚ್ಚಿನ ಶ್ರಮ ವಹಿಸಿದರು. ಶೀಘ್ರಗತಿಯಲ್ಲಿ ಕಟ್ಟಡ ನಿರ್ಮಾಣ ಕಾರ್ಯವು ಕೊನೆಗೊಂಡು 2002ರ ಜನವರಿ 25ರಂದು ಬಳ್ಳಾರಿಯ ಧರ್ಮಾಧ್ಯಕ್ಷ ಅತೀ ವಂದನೀಯ ಜೋಸೆಫ್ ಡಿ'ಸಿಲ್ವಾರವರ ದಿವ್ಯ ಹಸ್ತದಿಂದ ಉದ್ಘಾಟನೆ ಗೊಂಡಿತು. ಈ ಉದ್ಘಾಟನಾ ಸಮಾರಂಭಕ್ಕೆ ಸುಮಾರು ಒಂದು ಸಾವಿರ ಮಂದಿ ಹಾಜರಿದ್ದರು. ಅದೇ ದಿನ ಬೆಳಿಗ್ಗೆ ಸ್ಥಳೀಯ ಮಠದ ಸ್ವಾಮೀಜಿಯವರು ಭೇಟಿ ನೀಡಿದಾಗ ಸಾಂಪ್ರದಾಯಿಕ ಸ್ವಾಗತವನ್ನು ನೀಡಿ ಅವರನ್ನು ಆದರದಿಂದ ಹೊಸ ಕಟ್ಟದೊಳಗೆ ಬರಮಾಡಿಕೊಳ್ಳ ಲಾಯಿತು. ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾದ ಸ್ಥಳೀಯ ಶಾಸಕ ಶ್ರೀ ನಂದೀಹಳ್ಳಿ ಹಾಲಪ್ಪ ಹಾಗೂ ತಹಸಿಲ್ದಾರ್ ಶಿವಪ್ಪನವರು ಕಾರ್ಮೆಲ್ ಸಭೆಯ ಸದಸ್ಯರ ಸೇವೆಯನ್ನು ಶ್ಲಾಘಿಸಿದರು.

ಸ್ಥಳ ಸಮೀಕ್ಷೆ ನಡೆಸಿ, ವಾಸ್ತವ ಸ್ಥಿತಿಯನ್ನು ಅಧ್ಯಯನ ನಡೆಸಿ ಪರಿಶೀಲಿಸಿದ ನಂತರ ಈ ಕೆಳಗಿನ ಸಮಾಜ ಅಭಿವೃದ್ಧಿ ಕಾರ್ಯಗಳಿಗೆ ಪ್ರಮುಖ ಆದ್ಯತೆಯನ್ನು ನೀಡಲಾಯಿತು.


1. ಮೌಲ್ಯಾಧರಿತ ಶಿಕ್ಷಣ, ಪ್ರತ್ಯೇಕವಾಗಿ ಹೆಣ್ಣು ಮಕ್ಕಳಿಗೆ.
2. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ.
3. ಕೆಲವು ಸ್ವ–ಉದ್ಯೋಗ ಕಲ್ಪಿಸುವುದರ ಮುಖಾಂತರ ಸ್ತ್ರೀಯರ ಏಳಿಗೆ.
4. ಶಾಲೆಯಿಂದ ಹೊರಬಿದ್ದ ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆಯಲು ಪ್ರೋತ್ಸಾಹ ಹಾಗೂ ಮಾರ್ಗದರ್ಶನ
5. ವಿದ್ಯಾರ್ಥಿಗಳಿಗೆ ಟ್ಯೂಶನ್ ಸೌಲಭ್ಯ
6. ಕಂಪ್ಯೂಟರ್ ತರಭೇತಿ
7. ಆರೋಗ್ಯ ಶಿಬಿರಗಳ ಮುಖಾಂತರ ಜನರಲ್ಲಿ ಸ್ವಚ್ಛತೆ ಹಾಗೂ ಆರೋಗ್ಯದ ಹೆಚ್ಚಿನ ತಿಳುವಳಿಕೆ ಮೂಡಿಸುವುದು.
8. ನಿರುದ್ಯೋಗಿ ಯುವಕ ಯುವತಿಯರಿಗೆ ವಾಹನ ರಿಪೇರಿ ಹಾಗೂ ಡ್ರೈವಿಂಗ್ ಕಲಿಕೆಯ ಮೂಲಕ ಉದ್ಯೋಗ ಸೌಲಭ್ಯವನ್ನು ಕಲ್ಪಿಸುವುದು.
9. ಬಡಜನರ ಮನೆ ದುರಸ್ತಿ ಕಾರ್ಯ

Scanned by CamScanner


10. ಯುವಕರಿಗೆ ಆಟೋಟ ಸೌಲಭ್ಯ, ಕ್ರಿಕೆಟ್ ಪಂದ್ಯ, ಮಕ್ಕಳಿಗೆ ಪ್ರತಿಭಾ ದಿನ ಆಚರಣೆ ಇತ್ಯಾದಿ.

ಈ ಎಲ್ಲಾ ಯೋಜನೆಗಳನ್ನು ಕಾರ್ಯಗತಗೊಳಿಸುವ ಕಾರ್ಯಕ್ಕೆ ಸಹೋದರ ಜೋಕಿಂರವರ ನಂತರ ಕ್ರಮವಾಗಿ ಸಹೋದರರಾದ ವಿಕ್ಟರ್ ಪಾಯ್ಸ್, ಸೆಲ್ವಾ ಡಿ., ಲಿಗೋರಿ ಕ್ರಾಸ್ತಾ ಹಾಗೂ ಆನಂದ್ ಕುಮಾರ್ ಸೇರಿಕೊಂಡರು. ಸ್ವಾಮಿ ನೆಲ್ಸನ್ ಪಿಂಟೋರವರು ಸುಮಾರು ಐದು ತಿಂಗಳು ಸ್ವಾಮಿ ಹೆನ್ರಿಯವರಿಗೆ ಸಹಾಯಕರಾಗಿ ಸೇವೆ ಸಲ್ಲಿಸಿ ಸುತ್ತಲಿನ ಜನರ ಮನ ಸೂರೆಗೈದರು. 2002ರ ಜೂನ್‌ನಲ್ಲಿ ಸ್ವಾಮಿ ವಿಲಿಯಂ ಮಿರಾಂದರವರನ್ನು ಕಾರ್ಮೆಲ್ ಸೇವಾ ಸದನದ ನಿರ್ದೇಶಕರನ್ನಾಗಿ ನೇಮಿಸಲಾಯಿತು. ಇವರು ಈ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಕ್ರಮಬದ್ಧಗೊಳಿಸಿ ಜಾರಿಗೊಳಿಸುವಲ್ಲಿ ಹಗಲಿರುಳು ದುಡಿಯುತ್ತಿದ್ದಾರೆ. ಅಂದು ಇವರ ಪೂರ್ವಜರು ಕಂಡ ಕನಸು ಈಗ ನನಸಾಗಿರುವುದು ನಿಜವಾಗಿಯೂ ಸತ್ಯದ ಮಾತು.

ಹೂವಿನ ಹಡಗಲಿ ತಾಲೂಕು ನಕ್ಷೆ



Scanned by CamScanner



## 'ಅರಿವೇ–ಗುರು'

ದೂರವಾಣಿ: 08399 (C) 840251
(R) 840555

ಸನ್ಮಾನ್ಯ ಸೇವಾಕಾಂಕ್ಷಿಗಳೂ ಹಾಗೂ ಆತ್ಮೀಯರೂ ಆದ ಫಾ। ವಿಲಿಯಮ್ ಮಿರಾಂದಾರವರಿಗೆ ಹಾಗೂ ತಮ್ಮ ಎಲ್ಲ ಬಳಗಕ್ಕೆ ''ಯುಗಾದಿಯ ಹಾರ್ದಿಕ ಶುಭಾಶಯಗಳು''.

**ಕಾರ್ಮೆಲ್ ಸೇವಾಸದನದ ಕಾರ್ಯಗಳ ಕುರಿತು ಅನಿಸಿಕೆಗಳು:** ನಿಮ್ಮ ಸೇವಾಸದನವು ಪ್ರಾರಂಭವಾಗಿ ಕೇವಲ ಒಂದು ವರ್ಷದಲ್ಲಿಯೇ ಸೇವೆಗೆ, ಶಿಸ್ತಿಗೆ, ಸ್ವಚ್ಛತೆಗೆ, ಅಚ್ಚುಕಟ್ಟುತನಕ್ಕೆ ಹಾಗೂ ಸಮಯಪ್ರಜ್ಞೆ ಮತ್ತು ಕಠಿಣ ಪರಿಶ್ರಮಕ್ಕೆ ಮಾದರಿಯಾಗಿದೆ. ಈ ಎಲ್ಲವುಗಳಿಗೆ ನಿಮ್ಮ ಸೇವಾ ಭವನದ ಪರಿಸರ ಮತ್ತು ಜನಪರ ಚಿಂತನೆ ಹಾಗೂ ಸೇವಾ ಚಟುವಟಿಕೆಗಳು ಮುಕುಟಪ್ರಾಯವಾಗಿವೆ.

ನೀವು ನಮ್ಮ ಭಾಗದಲ್ಲಿ ಮಾಡುತ್ತಿರುವ ವಿವಿಧ ಸೇವೆಗಳು ಯಾವುದೇ ಜಾತಿ, ಧರ್ಮ ಅಥವಾ ಪಕ್ಷ–ಪಂಗಡಗಳಿಗೆ ಸೀಮಿತವಾಗಿರದೇ ಅರ್ಹ ಮತ್ತು ಅವಶ್ಯಕತೆಗಳ ಆಧಾರವಾಗಿವೆ.

ಜನರ ಅವಶ್ಯಕತೆಗಳಾದ ಶಿಕ್ಷಣ, ಆರೋಗ್ಯ, ಸ್ವಯಂ ಉದ್ಯೋಗ ಮತ್ತು ಆಧುನಿಕ ಕಂಪ್ಯೂಟರ್ ತಂತ್ರಜ್ಞಾನ ಸೌಲಭ್ಯಗಳನ್ನು ನೀವು ಪೂರೈಸುವುದರೊಂದಿಗೆ, ಪ್ರಾರಂಭ ಮಾಡುತ್ತಿರುವ ''ಚಾಲಕರ ತರಬೇತಿ ಶಾಲೆ''ಯು ನಿಮ್ಮ ಸೇವೆಯ ಒಂದು ಮಹತ್ವಪೂರ್ಣ ಸಾಧನೆಯಾಗಿದೆ.

ಈ ಎಲ್ಲವುಗಳೊಂದಿಗೆ ನೀವು ಸ್ಥಳೀಯ ಸಂಘ–ಸಂಸ್ಥೆಗಳೊಂದಿಗೆ ಸಹಕರಿಸುವ ಮನೋಭಾವನೆಯು ಪ್ರಶಂಸನೀಯವಾಗಿದೆ.

ನಿಮ್ಮ ಸೇವಾಸದನವು ಇನ್ನೂ ಉನ್ನತ ಮಟ್ಟಕ್ಕೆ ಏರಲೆಂದು ಹಾರೈಸುವ,

ತಮ್ಮ ಆತ್ಮೀಯನಾದ,

**ಲಯನ್ ಪ್ರೊ। ಎಫ್. ಸಿ. ಕಾಲವಾಡಮಠ**

*ಶಾಲಾ ವಿದ್ಯಾಭ್ಯಾಸಕ್ಕೆ 2002–2003ರ ಜಿಲ್ಲಾಧ್ಯಕ್ಷರು*

---



## ಅನಿಸಿಕೆಗಳು

ತಾವು ತಮ್ಮ ಸೇವಾಸದನವನ್ನು ಈ ಭಾಗದಲ್ಲಿ ಪ್ರಾರಂಭಿಸಿದಾಗಿನಿಂದ ನೀವು ಗ್ರಾಮೀಣ ಪ್ರದೇಶದಲ್ಲಿ ಹಾಗೂ ನಗರ ಪ್ರದೇಶದಲ್ಲಿ ಮಾಡುತ್ತಿರುವ ಸೇವಾಚಟುವಟಿಕೆಗಳು ಜನಪರ, ಬಡಪರ ಮತ್ತು ಕೋಮು ಸೌಹಾರ್ದತೆಯುಳ್ಳದ್ದಾಗಿವೆ. ಅದಕ್ಕೆ ತಮಗೆ ನಮ್ಮ ಅಭಿನಂದನೆಗಳು.

ಅತ್ಯಾಧುನಿಕ ತಂತ್ರಜ್ಞಾನದ ಸೇವಾ ಚಟುವಟಿಕೆಗಳನ್ನು ಗ್ರಾಮೀಣ ಜನತೆಗೆ ತಲುಪಿಸುವಲ್ಲಿ ತಾವು ಇನ್ನೂ ಹೆಚ್ಚು ನಿರತರಾಗಿ ಈ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸುವೆನು.

ಈಗ ನೀವು ಕೈಗೊಂಡಿರುವ ಶೈಕ್ಷಣಿಕ, ಆರೋಗ್ಯ ಮತ್ತು ಸ್ವ–ಉದ್ಯೋಗ ಆಧಾರಿತವಾದ ಸೇವಾ ಚಟುವಟಿಕೆಗಳು ಪ್ರಶಂಸನೀಯವಾಗಿವೆ. ಅಲ್ಲದೇ ನೀವು ಸ್ಥಳೀಯ ಸಂಘ ಸಂಸ್ಥೆಗಳೊಂದಿಗೆ ಹಾಗೂ ಇಲಾಖೆಗಳೊಂದಿಗೆ ಸಹಕರಿಸುತ್ತಿರುವ ಮನೋಭಾವನೆಗೆ ಅಭಿನಂದನೆಗಳು.

ನಿಮ್ಮ ಸೇವಾಸಂಸ್ಥೆಯು ಇನ್ನೂ ಉನ್ನತ ಮಟ್ಟಕ್ಕೆ ತಲುಪುವಂತಾಗಲಿ ಎಂದು ಶುಭ ಕೋರುವೆನು.

ತಮ್ಮವನಾದ,

**ಎಸ್. ವಿ. ಬಡವಾಡಗಿ, ಸಿ.ಪಿ.ಐ.**

ಹಡಗಲಿ

Scanned by CamScanner

Dated: 3-4-2003



## *Message*

We sincerely congratulate you for the services you render to the rural as well as urban citizens of Hadagali without any discrimination.

I wish that the use of modern equipments in this center may help the people you cater, to develop themselves and the area where they make their living.

All your services like educating the children and self-employment are recognized and appreciated. Also your co-operation with other institutions and offices speak of your capacity to keep good contact and friendly atmosphere.

I wish that your center may still grow higher and yield abundant fruits.

Yours sincerely,

**S.V. Badawadagi,** CPI

---

Ph.: 08399 (C) 840251
(R) 840555



## *Message*

*Respected and dear Rev. Fr. William Miranda and the community, A word about your Carmel Seva Sadan: within a year of its inception, your center bags a very good name for its service, discipline, cleanliness and hard work. The enterprises that you have started and the number of people you encouraged is really note-worthy.*

*The center meets various needs of the people covering different fields like education, medical care, self-employment, computer training and specially the driving school, which is one of the best achievements.*

*In spite of these diverse activities you have been co-operating with other local institutions, which is highly appreciated.*

*I wish that your centre reaches its zenith soon.*

*Yours lovingly,*

Ln. Prof. F. C. Kalawadamath
District Chairman 2002-2003 for School Education

Scanned by CamScanner

# Carmel Free Boarding



In Huvinahadagali Taluk majority of the people are uneducated and their economical condition is very poor. Child employment is common sight here, as parents are unable to educate their children due to acute poverty. In order to tackle this problem, we opened Carmel Free Boarding on 10.06.2002, which was blessed and inaugurated by Rev. Fr. Joe Tauro, the Provincial of Karnataka-Goa. We selected 12 poor high school students from the villages in the vicinity and provided them with all facilities like free board, lodge, uniform, fees, books, sports equipments etc. Their health is taken care through timely free medical check up. We also provide free tuition to other children in difficult subjects like Mathematics, Science and English. Giving emphasis to a value-based life helping the students cultivate values of discipline, sincerity and hard work, we have been able to run the free boarding house successfully, despite financial constraints.



T. Halesh, K. Suresh, Hulgappa, K. Subash, Sangana, Basappa, K. Ravi, H. Ramesh, Hanumesh, Basavana Gowda, Venkatagiri and Jyothi.

Scanned by CamScanner

# ಕಾರ್ಮೆಲ್ ಉಚಿತ ವಿದ್ಯಾರ್ಥಿ ನಿಲಯ

ಕಡು ಬಡವರನ್ನು ಹೊಂದಿರುವ ಹೂವಿನ ಹಡಗಲಿ ತಾಲೂಕಿನಲ್ಲಿ ಬಡತನದಿಂದ ಬಳಲುವ ಎಷ್ಟೋ ಕುಟುಂಬಗಳು ಮಕ್ಕಳನ್ನು ಓದಿಸಲು ಸಾಧ್ಯವಾಗದೇ, ಶಾಲೆ ಬಿಡಿಸಿ ಕೂಲಿ ಕೆಲಸದಲ್ಲಿ ಜೀವನ ನಡೆಸುವುದು ಸರ್ವೇಸಾಮಾನ್ಯ ದೃಶ್ಯ. ಇದನ್ನು ಮನಗಂಡು ನಾವು 10–6–2002 ರಂದು ಕಾರ್ಮೆಲ್ ಉಚಿತ ವಿದ್ಯಾರ್ಥಿ ನಿಲಯವನ್ನು ಧರ್ಮಪ್ರಾಂತ್ಯಾಧಿಕಾರಿಗಳಾದ ಫಾ|| ಜೋ ತಾವ್ರೋರವರಿಂದ ಉದ್ಘಾಟಿಸಿ ನಂತರ ಆಶೀರ್ವದಿಸಲಾಯಿತು. ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಫಾ|| ಹೆನ್ರಿ ಮೋರಾಸ್‌ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ 1) ಫಾ|| ಆರ್ಚಿ, 2) ಫಾ|| ಪ್ಯಾಟ್ರಿಕ್, 3) ಫಾ|| ಡಯಾಗೊ, 4) ಫಾ|| ಕ್ಲಿಫರ್ಡ್‌ರವರು ವಹಿಸಿದ್ದರು.

8ನೇ ತರಗತಿಯಿಂದ ಎಸ್.ಎಸ್.ಎಲ್.ಸಿ. ವರೆಗಿನ 12 ಬಡ ವಿದ್ಯಾರ್ಥಿಗಳನ್ನು ನಾಲ್ಕು ಹಳ್ಳಿಗಳಿಂದ ಆಯ್ಕೆ ಮಾಡಿದೆವು. ಈ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಸೌಲಭ್ಯಗಳೊಂದಿಗೆ ಅಂದರೆ ವಸತಿ, ಊಟ, ಶಾಲಾ ಸಮವಸ್ತ್ರ, ಶುಲ್ಕ, ಅಗತ್ಯವಿರುವ ಪುಸ್ತಕ, ಲೇಖನಿ ಹಾಗೂ ಮಕ್ಕಳ ಆರೋಗ್ಯ ತಪಾಸಣೆ, ಕ್ರೀಡಾ ಉಪಕರಣಗಳನ್ನು ಕೊಡುವುದರ ಮೂಲಕ ಮಕ್ಕಳ ವಿವಿಧ ಪ್ರತಿಭೆಗಳನ್ನು ಗುರ್ತಿಸಿ ಬೆಳೆಸಿರುವೆವು ಹಾಗೂ ಉಳಿದ ಸಮಯದಲ್ಲಿ ಹಳ್ಳಿಯಿಂದ ಬಂದಿರುವ ಈ ಮಕ್ಕಳಿಗೆ ಕಷ್ಟ ಎನಿಸುವ ಗಣಿತ, ವಿಜ್ಞಾನ, ಇಂಗ್ಲೀಷ್ ವಿಷಯಗಳನ್ನು ಟ್ಯೂಷನ್ ಕೊಡುವುದರ ಮೂಲಕ ಶಿಕ್ಷಣದಲ್ಲಿ ಮುಂದೆ ಬರಲು ಪ್ರಯತ್ನಿಸಿದ್ದೇವೆ. ಶಿಸ್ತು, ಶ್ರಮ, ಪ್ರಾಮಾಣಿಕತೆಗೆ ಹೆಚ್ಚು ಗಮನ ಕೊಡುತ್ತಾ ನಾವು ಇಲ್ಲಿಯವರೆಗೂ ವ್ಯವಸ್ಥಿತವಾಗಿ ಉಚಿತ ವಿದ್ಯಾರ್ಥಿ ನಿಲಯವನ್ನು ನಡೆಸಿಕೊಂಡು ಬಂದಿರುವೆವು.






ಟಿ. ಹಾಲೇಶ್, ಕಾಂತೇಶ್, ಕೆ. ಸುರೇಶ್, ಹುಲ್ಗಪ್ಪ, ಕೆ. ಸುಭಾಶ್, ಸಂಗನ ಬಸಪ್ಪ, ಕೆ. ರವಿ, ಎಚ್. ರಮೇಶ್, ಹನುಮೇಶ್, ಬಸವನಗೌಡ, ವೆಂಕಟಗಿರಿ ಮತ್ತು ಜ್ಯೋತಿ.


Scanned by CamScanner

# ಕಾರ್ಮೆಲ್ ಕಂಪ್ಯೂಟರ್ ಕೇಂದ್ರ

ಕಾರ್ಮೆಲ್ ಕಂಪ್ಯೂಟರ್ ಕೇಂದ್ರವು 2002, ಜುಲೈ 16ರಂದು ಬಳ್ಳಾರಿ ಧರ್ಮಾಧ್ಯಕ್ಷರಾ ಅ ವಂ। ಡಾ। ಜೋಸೆಫ್ ಡಿ'ಸಿಲ್ವಾ ಅವರಿಂದ ಉದ್ಘಾಟಿಸಲ್ಪಟ್ಟಿತ್ತು, ಮಕ್ಕಳಿಗೆ ಕಂಪ್ಯೂಟ ಬಗ್ಗೆ, ಅದನ್ನು ಉಪಯೋಗಿಸುವ ವಿಧಾನ ಮತ್ತು ಅದರಿಂದ ಲಭಿಸುವ ಪ್ರಯೋಜನ ಬಗ್ಗೆ ತಿಳುವಳಿಕೆಯನ್ನು ಕೊಡುವುದೇ ಈ ಸಂಸ್ಥೆಯ ಮುಖ್ಯ ಧ್ಯೇಯವಾಗಿದೆ. ಮುಖ್ಯವಾ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಜ್ಞಾನವನ್ನು ಹೆಚ್ಚಿಸಲು ಸಹಾಯಕವಾಗಿದೆ.









Scanned by CamScanner

# Carmel Computer Centre

Carmel Computer Centre was inaugurated on the 16th July, 2002 by Rt. Rev. Joseph D'Silva, Bishop of Bellary. The aim of Carmel Computer Centre is to educate the poor people regarding computer, its functions, its use and the benefits. The computer centre is in a special way helping the boarders in upgrading their knowledge regarding computers.







Scanned by CamScanner

# Carmel Tailoring Centres for Women

*At a time when the literate keep knocking the doors of employers after employers for job opportunities the illiterate are merely impossible. More so, to the inhabitants of Hadagali taluk. The people here earn Rs 20-30 by doing cooli work to eke out a living. But the rain-starved, parched land can't even give them this opportunity! Hence the people are facing the inevitable situation of migrating to better pastures.*

*It is into this situation that the Carmelite Fathers of Karnataka - Goa Province stepped in to provide self-employment to drive away the menace of unemployment. In various villages Tailoring centres have been set up for women. Past one year 'Carmel Seva Sadan' has the distinction of having started such centres in 6 villages. In each centre about 10-15 women have honed their skills in tailoring under an expert tutor. Each batch is divided into groups to make sure that the group gets atleast 2 hours of training.*

*Every two months, practical exams are conducted. The final exam takes place after the six-month course has been completed. The women are awarded with certificates.*

*In the last one year (2002-2003) a total of 82 women from six villages have successfully completed their training. And 15 of them have already begun their self-employment on their own sewing machines.*

*Following are the snaps and names of these six centres.*

Scanned by CamScanner

# ಕಾರ್ಮೆಲ್ ಮಹಿಳಾ ಹೊಲಿಗೆ ತರಬೇತಿ ಕೇಂದ್ರ

ವಿದ್ಯಾಭ್ಯಾಸವನ್ನು ಪಡೆದು ಕೆಲಸಕ್ಕಾಗಿ ಊರೂರು ಸುತ್ತಾಡುತ್ತಾ ಕೊನೆಗೆ ಕೆಲಸವೇ ಸಿಗದೆ ನಿರುದ್ಯೋಗಿಗಳಾಗಿರುವ ಈ ಕಾಲದಲ್ಲಿ, ಅವಿದ್ಯಾವಂತರಿಗೆ ಕೆಲಸ ದೊರೆಯುವುದು ಕನಸಿನ ಮಾತು. ಅದೂ ಸಹಾ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಗ್ರಾಮಸ್ಥರಿಗೆ ಖಂಡಿತವಾಗಿಯೂ ಕನಸಲ್ಲೂ ಬಾರದ ಮಾತು. ಯಾಕೆಂದರೆ ಆ ಜನರು ವ್ಯವಸಾಯ ಹಾಗೂ ಕೂಲಿ ಕೆಲಸವನ್ನು ಮಾಡಿ ಒಂದು ದಿನಕ್ಕೆ 20ರಿಂದ 30 ರೂಪಾಯಿ ಸಂಬಳ ಗಳಿಸಿ ಬದುಕುವವರು. ಆದರೆ ಮಳೆ ಇಲ್ಲದೆ, ಒಣಗಿ ಹೋದ ಭೂಮಿಯಲ್ಲಿ ಬೆಳೆಯಾದರೂ ಹೇಗೆ ಪಡೆಯಲಿ? ಬೆಳೆ ಇಲ್ಲದೆ, ಹೇಗೆ ಜೀವನ ನಡೆಸಲಿ? ಆದುದರಿಂದ ಜೀವನೋಪಾಯಕ್ಕಾಗಿ ಹಳ್ಳಿಗಳಿಂದ ಕಾಫಿ ತೋಟಗಳಿಗೆ ವಲಸೆ ಹೋಗಿ ಅಲ್ಲಿ ದುಡಿದು ಜೀವನ ನಡೆಸುವಂತಹ ಪರಿಸ್ಥಿತಿ ಹಡಗಲಿ ತಾಲೂಕಿನ ಗ್ರಾಮಸ್ಥರಿಗೆ ಬಂದಿದೆ.

ಇಂತಹ ಪರಿಸ್ಥಿತಿಯಲ್ಲಿದ್ದವರಿಗೆ ಸ್ವ–ಉದ್ಯೋಗಭರಿತಗೊಳಿಸಿದರೆ, ಸ್ವಲ್ಪ ಮಟ್ಟಿಗೆಯಾದರೂ, ನಿರುದ್ಯೋಗವನ್ನು ಹೋಗಲಾಡಿಸಬಹುದು. ಇದಕ್ಕಾಗಿ, ಮಹಿಳೆಯರಿಗೆ, ಅವರವರ ಹಳ್ಳಿಗಳಲ್ಲಿ ಹೊಲಿಗೆ ತರಬೇತಿಯನ್ನು ನೀಡಿ, ಅವರನ್ನು ಸ್ವ–ಉದ್ಯೋಗಭರಿತರನ್ನಾಗಿಸಲು ಕಾರ್ಮೆಲ್ ಸೇವಾ ಸದನವು ''ಕಾರ್ಮೆಲ್ ಹೊಲಿಗೆ ತರಬೇತಿ ಕೇಂದ್ರ''ಗಳನ್ನು ಆರಂಭಿಸಿತು. ಕಳೆದ ಒಂದು ವರ್ಷದಲ್ಲಿ ಆರು ಹಳ್ಳಿಗಳಲ್ಲಿ ಹೊಲಿಗೆ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿದೆ. ಪ್ರತಿಯೊಂದು ಕೇಂದ್ರದಲ್ಲಿ ಹೊಲಿಗೆಯಲ್ಲಿ ನಿಪುಣರಾದ ಒಂದು ಉಪಾಧ್ಯಾಯನಿಯನ್ನು ನೇಮಿಸಿ, 12ರಿಂದ 18 ಬಡ ಮಹಿಳೆಯರನ್ನು ತರಬೇತಿಗೆ ಒಳಪಡಿಸಿದ್ದೇವೆ. ಈ ತಂಡವನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಿ ಪ್ರತಿಯೊಂದು ಗುಂಪಿಗೆ ಪ್ರತಿ ದಿವಸ ಎರಡು ಗಂಟೆಗಳ ತರಬೇತಿಯನ್ನು ಕೊಡಲಾಗುತ್ತದೆ.

ಪ್ರತಿ ಎರಡು ತಿಂಗಳಿಗೊಮ್ಮೆ ಪ್ರ್ಯಾಕ್ಟಿಕಲ್ ಪರೀಕ್ಷೆಯನ್ನು ಮಾಡಲಾಗುತ್ತದೆ. ಆರು ತಿಂಗಳ ತರಬೇತಿ ಮುಗಿದ ತಕ್ಷಣ ಅಂತಿಮ ಪರೀಕ್ಷೆಯನ್ನು ನಡೆಸಿ ಅದರಲ್ಲಿ ದೊರೆತ ಅಂಕಗಳನ್ನು ಪ್ರಮಾಣ ಪತ್ರದಲ್ಲಿ ಹಾಕಿ ತರಬೇತಿ ಪ್ರಮಾಣ ಪತ್ರವನ್ನು ಕೊಡಲಾಗುವುದು.

ಕಳೆದ ಒಂದು ವರುಷದಲ್ಲಿಯೇ (2002–2003) ಆರು ಹಳ್ಳಿಗಳಲ್ಲಿ ಒಟ್ಟು 82 ಮಹಿಳೆಯರು ಹೊಲಿಗೆ ತರಬೇತಿಯನ್ನು ಪಡೆದುಕೊಂಡಿದ್ದಾರೆ. ಇವರಲ್ಲಿ 15 ಮಂದಿ ಇಷ್ಟರಲ್ಲಿಯೇ ಹೊಲಿಗೆ ಯಂತ್ರಗಳನ್ನು ಪಡೆದು ಸ್ವಂತ ಉದ್ಯೋಗದಲ್ಲಿ ತೊಡಗಿದ್ದಾರೆ.

ಈ ಆರು ಘಟಕಗಳ ಭಾವಚಿತ್ರಗಳು ಹಾಗೂ ಅವರ ಹೆಸರುಗಳನ್ನು ಮುಂದಿನ ಪುಟಗಳಲ್ಲಿ ಮುದ್ರಿಸಿದ್ದನ್ನು ನೀವು ವೀಕ್ಷಿಸಬಹುದು.

Scanned by CamScanner


# ಕಾರ್ಮೆಲ್ ಹೊಲಿಗೆ ತರಬೇತಿ ಕೇಂದ್ರ – 1

## ವರಕನ ಹಳ್ಳಿ









ತಾ. 19.6.2002ರಂದು ವರಕನ ಹಳ್ಳಿ ಗ್ರಾಮದಲ್ಲಿ ಕಾರ್ಮೆಲ್ ಹೊಲಿಗೆ ತರಬೇತಿ ಕೇಂದ್ರವನ್ನು ಹಡಗಲಿ ಶಾಸಕರಾದ ನಂದಿಹಳ್ಳಿ ಹಾಲಪ್ಪರ ಮುಖಾಂತರ ಉದ್ಘಾಟಿಸಲಾಯಿತು. ಕನ್ನಿಹಳ್ಳಿ ಕೋಟ್ರೇಶ್‌ರವರು ತಮ್ಮ ಮನೆಯಲ್ಲಿ ಒಂದು ಕೊಠಡಿಯನ್ನು ತರಬೇತಿ ಕೇಂದ್ರ ನಡೆಸಲು ನೆರವು ಮಾಡಿಕೊಟ್ಟರು. ಇಲ್ಲಿ 12 ಮಂದಿ ಬಡ ಮಹಿಳೆಯರು, ತರಬೇತಿಯನ್ನು ಪಡೆದರು. ಕು. ಪದ್ಮಶ್ರೀಯವರು ತರಬೇತಿಯನ್ನು ಕೊಟ್ಟ ಉಪಾಧ್ಯಾಯನಿಯರಾದರೆ, ಮಮತ, ರೇಣುಕಾ, ಜೆ. ಹಾಲಮ್ಮ ಜ್ಯೋತಿ, ಸುನಿತ, ಗಿರಿಜಾ, ಸಿದ್ದಮ್ಮ, ಹೆಚ್. ಮಂಜುಳಾ, ಕೆ. ಬಸಮ್ಮ ಕೆ. ಶಾಂತಮ್ಮ, ಬಿ.ಎಂ. ನಿರ್ಮಲಾ ಹಾಗೂ ಜೆ. ಮಂಜುಳಾ ತರಬೇತಿ ಪಡೆದ ವಿದ್ಯಾರ್ಥಿನಿಯರು.

Scanned by CamScanner

# Carmel Tailoring Centre - I

## Varakanahalli









On 19-06-2002, Nandihalli Halappa, MLA, of Hadagali inaugurated 'Carmel Tailoring Centre at Varakanahalli. Kannihalli Kotresh volunteered to make available one of his rooms in his house for the purpose. 12 poor women received this training in the centre, they are Mamatha, Renuka, J. Halamma, Jyothi, Sunitha, Girija, Siddamma, H. Manjula, K. Basamma, K. Shanthamma, B. M. Nirmala and J. Manjula. Miss Padmashree was the trainer. On 8-4-2003 the women were awarded with the certificates.

Scanned by CamScanner

# Carmel Tailoring Centre - 2

## Hadagali











The Second Carmel Tailoring Centre was started on 9-9-2002 at Hadagali in the premises of Carmel Seva Sadan. Rev. Fr. William Miranda, the director of Carmel Sadan inaugurated and blessed the centre. 15 women received the training here, they are: Uma, Navidha, Tara, Navibhan, Shobha, Noorjan Akkamma, Rajia, Manjula, Gauramma, Rajeshwari, Shanta, Manjula, Yashodha and Sridevi. Mrs. Ratna is the tutor. On April 8, 2003 they too received the certificates.


Scanned by CamScanner

# ಕಾರ್ಮೆಲ್ ಹೊಲಿಗೆ ತರಬೇತಿ ಕೇಂದ್ರ – 2

## ಹಡಗಲಿ







ತಾ. 9.9.2002ರಂದು ಎರಡನೆ, ಕಾರ್ಮೆಲ್ ಹೊಲಿಗೆ ಕೇಂದ್ರವನ್ನು ಕಾರ್ಮೆಲ್ ಸೇವಾ ಸದನದ ವಠಾರದಲ್ಲಿ ಆರಂಭಿಸಿದೆವು. ಸೇವಾ ಸದನದ ನಿರ್ದೇಶಕರಾದ ವಂ. ಸ್ವಾಮಿ ವಿಲಿಯಂ ಮಿರಾಂದರವರು ಉದ್ಘಾಟಿಸಿ ಆಶೀರ್ವದಿಸಿದರು. ಇಲ್ಲಿ 15 ಮಂದಿ ಮಹಿಳೆಯರು ಆರು ತಿಂಗಳ ತರಬೇತಿಯನ್ನು ಪಡೆದರು. ಶ್ರೀಮತಿ ರತ್ನರವರು ತರಬೇತಿಯನ್ನು ನೀಡಿದರು. ಉಮಾ, ನವಿಧಾ, ತಾರಾ, ನಾನೀಭಾಯಿ, ಶೋಭ, ನೂರ್ಜನ್, ಅಕ್ಕಮ್ಮ, ರಬೇಯ, ಮಂಜುಳ, ಗೌರಮ್ಮ, ರಾಜೇಶ್ವರಿ, ಶಾಂತ, ಮಂಗಳ, ಯಶೋಧ ಮತ್ತು ಶ್ರೀದೇವಿಯವರು ತರಬೇತಿಯನ್ನು ಪಡೆದ ಮಹಿಳೆಯರು. ಇವರಿಗೆ ಏಪ್ರಿಲ್ 8ರಂದು ಹೊಲಿಗೆ ಪ್ರಮಾಣಪತ್ರ ಕೊಡಲಾಯಿತು.

Scanned by CamScanner

# ಕಾರ್ಮಿಲ್ ಹೊಲಿಗೆ ತರಬೇತಿ ಕೇಂದ್ರ – 3

## ಹಡಗಲಿ ನಗರ





ದಿನಾಂಕ 10.10.2002ರಂದು ಹಡಗಲಿ ನಗರದ ಪೋಲಿಸ್ ವಸತಿಗೃಹದಲ್ಲಿ ಮೂರನೇ ಕಾರ್ಮೆಲ್ ಹೊಲಿಗೆ ತರಬೇತಿ ಕೇಂದ್ರವನ್ನು ಐ.ಜಿ.ಪಿ.ಯವರಾದ ಹಾಯತ್‌ರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ, ಡಿ.ಎಸ್.ಪಿ. ಕೂಡ್ಲಿಗಿ, ಶಾಸಕರು, ನಂದಿಹಾಳ್ಳಿ ಹಾಲಪ್ಪ, ವಂ. ಸ್ವಾಮಿ ವಿಲಿಯಂ ಮಿರಾಂದ, ಸಿ.ಪಿ.ಐ. ಬಾದವಾಡಗಿ, ಹಡಗಲಿ ಎಸ್.ಐ. ಮಂಶೋಜರಾವ್, ಇಟ್ಟಿಗಿ ಎಸ್.ಐ. ಹಾಗೂ ಪ್ರೊ. ಕಲಾವಾಡಮಠ್ ಹಾಜರಿದ್ದರು.

ಇಲ್ಲಿ ಶ್ರೀಮತಿ ವಿಜಯಲಕ್ಷ್ಮಿಯವರನ್ನು ತರಬೇತಿ ಕೊಡಲು ನೇಮಿಸಲಾಯಿತು. 19 ಮಂದಿ ಮಹಿಳೆಯರನ್ನು ತರಬೇತಿಗೆ ನೇಮಿಸಲಾಯಿತು. ಶ್ರೀಮತಿಗಳಾದ ಸಾವಿತ್ರಿ, ಸಬೀನ, ನಿರ್ಮಲ, ಕೆ.ಎಂ. ಸಿದ್ದಮ್ಮ, ಟಿ.ಎನ್. ರೇಖ, ಸರೋಜ, ಹೆಚ್. ಲಕ್ಷ್ಮಿ, ಶೀಲಾ, ಉಮಾ, ದ್ರಾಕ್ಷಾಯಿನಿ, ಎಲ್. ಲಕ್ಷ್ಮಿ, ನೂರ್ಜನ್ ಮತ್ತು ಕುಮಾರಿಗಳಾದ ರಾಧಿಕಾ, ಎಂ. ಮಂಜುಳಾ, ಗೌರಿ, ಲಲಿತ ನಾಯ್ಕ್, ದಿಲ್‌ಶಾದ್, ರೇಶ್ಮ ಎಂ. ಶಾಂತಿಕುಮಾರಿ ಮತ್ತು ಕೊಟ್ರಮ್ಮ, ಇವರಿಗೆ ತಾ. 8.4.03ರಂದು ತರಬೇತಿ ಪ್ರಮಾಣಪತ್ರಗಳನ್ನು ಹಡಗಲಿ ಸಿ.ಪಿ.ಐ. ಬಾಡವಾಡಗಿಯವರ ಮುಖಾಂತರ ಕೊಡಲಾಯಿತು.





Scanned by CamScanner

# Carmel Tailoring Centre - 3

## Hadagali Town






The third Carmel Tailoring Centre was started on 10-10-2002 at the police quarters in Hadagali town. I.G.P. Hayat inaugurated the centre as D.S.P. Nandihalli Halappa, MLA, Rev. Fr. William Miranda, CPI Badavadagi Hadagali, S. I. Mankogirav, Ittigi S. I. and Prof. Kalavadamat were the Chief Guests. 19 women were trained here under Mrs. Vijaylakshmi. The trainees were: Savithri, Sabeena, Nirmala K.M., Siddamma, T.N. Rekha, Saroja, H. Lakshmi, Sheela, Uma, Drakshayini, L. Lakshmi, Noorjan, Radhika, M. Manjula Gowri, Lalitha Nayak, Dilshad, Reshma, M. Shantikumari and Kotramma. They were awarded certificates on 8.4.2003 by C.P.I. Badavadagi.





Scanned by CamScanner

# Carmel Tailoring Centre - 4




## Mahajanada Halli




Very Rev. Fr. Joe Tauro, the provincial of Carmelites, K.G. Province inaugurated the Carmel Tailoring Centre in Mahajanada Halli, which is 23 kms from Hadagali on 22.01.2003. Miss Anna was the Chief Guest, Shekarappa and Nijalingappa organized the programme. Under the training of Mrs. Manjula 12 poor women are getting training here. They are: Umadevi, K. Ratnamma, K. Basamma, A. Saraswathi, Bhagyamma, Devakka, Gangamma, Bhagyamma, A. Latha and S. Renuka.





Scanned by CamScanner

# ಕಾರ್ಮೆಲ್ ಹೊಲಿಗೆ ತರಬೇತಿ ಕೇಂದ್ರ – 4



## ಮಹಾಜನದ ಹಳ್ಳಿ



ದಿನಾಂಕ 22.1.2003ರಂದು ಹಡಗಲಿಯಿಂದ 23 ಕಿ.ಮೀ. ದೂರವಿರುವ ಮಹಾಜನದಹಳ್ಳಿಯಲ್ಲಿ ಕಾರ್ಮೆಲ್ ಹೊಲಿಗೆ ತರಬೇತಿ ಕೇಂದ್ರವನ್ನು ಕಾರ್ಮೆಲ್ ಸಭೆಯ ಪ್ರಾಂತ್ಯಾಧಿಕಾರಿ ವಂ. ಸ್ವಾಮಿ ಜೋ ತಾವ್ರೊರವರು ಉದ್ಘಾಟಿಸಿದರು. ಕುಮಾರಿ ಅನ್ನರವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಶೇಖರಪ್ಪ ಮತ್ತು ನಿಜಲಿಂಗಪ್ಪರವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಇಲ್ಲಿ 12 ಮಂದಿ ಬಡ ಮಹಿಳೆಯರು ತರಬೇತಿಯನ್ನು ಪಡೆಯುತ್ತಿದ್ದಾರೆ: ಉಮಾದೇವಿ, ಕೆ. ರತ್ನಮ್ಮ ಕೆ. ಬಸಮ್ಮ ಎ. ಸರಸ್ವತಿ, ಕೆ. ಭಾಗ್ಯಮ್ಮ ಗಂಗಮ್ಮ ಭಾಗ್ಯಮ್ಮ ದೇವಕ್ಕ, ಎ. ಲತಾ ಹಾಗೂ ಎಸ್. ರೇಣುಕಾರವರು. ಶ್ರೀಮತಿ ಮಂಜುಳಾರವರು ತರಬೇತಿಯನ್ನು ಕೊಡುತ್ತಿದ್ದಾರೆ.





Scanned by CamScanner

# ಕಾರ್ಮೆಲ್ ಹೊಲಿಗೆ ತರಬೇತಿ ಕೇಂದ್ರ – 5

## ಗೋವಿಂದಪುರ ತಂಡ




ತಾರೀಖು 10.5.2003ರಂದು ಹಡಗಲಿಯಿಂದ 17 ಕಿ.ಮೀ. ದೂರವಿರುವ ಗೋವಿಂದಪುರ ತಾಂಡದಲ್ಲಿ ಕಾರ್ಮೆಲ್ ಹೊಲಿಗೆ ತರಬೇತಿ ಕೇಂದ್ರವನ್ನು ಗ್ರಾಮ ಪಂಚಾಯತಿ ಅಧ್ಯಕ್ಷೆಯವರ ಮುಖಾಂತರ ಉದ್ಘಾಟಿಸಲಾಯಿತು. ಕಾರ್ಯಕ್ರಮವನ್ನು ಗ್ರಾಮದ ವೆಂಕಟೇಶ್ವರನವರು ನೆರವೇರಿಸಿದರು. ಇಲ್ಲಿ 18 ಮಂದಿ ಹೆಣ್ಣು ಮಕ್ಕಳು ಹೊಲಿಗೆ ತರಬೇತಿಯನ್ನು ಪಡೆಯುತ್ತಿದ್ದಾರೆ. ಸವಿತಾ ಬಾಯಿ, ಕಮಲ ಬಾಯಿ, ಜಯ ಬಾಯಿ, ಸವಿತಾ ಬಾಯಿ, ಗೀತಾ ಬಾಯಿ, ಜ್ಯೋತಿ ಬಾಯಿ, ಪರಿಮಳ ಬಾಯಿ, ಮಂಜುಳ, ಶಾಂತಿ ಬಾಯಿ, ರತ್ನ ಬಾಯಿ, ಶೀಲಾ ಬಾಯಿ, ದ್ರಾಕ್ಷಾಯಿನಿ ಬಾಯಿ, ಲಕ್ಷ್ಮಿ ಬಾಯಿ, ಲೋಲಿ ಬಾಯಿ, ಶಾಕಮ್ಮ ವಾಣಿಶ್ರೀ, ಪವಿತ್ರ ಮತ್ತು ದಾಕ್ಷಾಯಿನಿ ಬಾಯಿ. ಕುಮಾರಿ ಶಾರದಾರವರು ತರಬೇತಿಯನ್ನು ನೀಡುತ್ತಿದ್ದಾರೆ.








Scanned by CamScanner

# Carmel Tailoring Centre - 5

## G. P. Thanda - 2




On 10-5-2003 Carmel Tailoring Centre was started at Govindapura Thanda which 17 km. from Hadagali by the president of Grama Panchayat. 18 girls are getting training in this centre, they are Sarithabai, Ratnabai, Lalibai, Sheelabai, Drakshayinibai, Lakshmibai, Kamalabai, Parimalabai, Jayabai, Savithabai, Geethabai, Jyothibai, Manjula, Shanthibai, Shakamma, Vanishree, Pavithra and Dakshayinibai. Miss Sharada is the tutor.







Scanned by CamScanner

# Carmel Tailoring Centre - 6


## Hadagali - CSS





In the campus of Carmel Seva Sadan, Hadagali another Carmel Tailoring Centre was inaugurated on 8-4-2003 by Nandihalli Halappa - MLA from Hadagali. 12 women are getting training here, they are, S. Veeramma, Rekha, M. Jyothi, Sunitha, Baby, E. Lakshmi, Nilamma, B. Geetha, Shajada, H. Veeramma and Shobha. Mrs. Nagaratna is the tutor.





Scanned by CamScanner

# ಕಾರ್ಮೆಲ್ ಹೊಲಿಗೆ ತರಬೇತಿ ಕೇಂದ್ರ – 6

## ಹಡಗಲಿ





ಕಾರ್ಮೆಲ್ ಸೇವಾ ಸದನದ ವಠಾರದಲ್ಲಿ ಇನ್ನೊಂದು ತರಬೇತಿ ಕೇಂದ್ರವನ್ನು ತಾ. 8.4.2003ರಂದು ಹಡಗಲಿ ಶಾಸಕರಾದ ನಂದಿಹಳ್ಳಿ ಹಾಲಪ್ಪರ ಮುಖಾಂತರ ಉದ್ಘಾಟಿಸಲಾಯಿತು. ಇಲ್ಲಿ 12 ಮಂದಿ ಮಹಿಳೆಯರು ತರಬೇತಿಯನ್ನು ಪಡೆಯುತ್ತಿದ್ದಾರೆ. ಎಸ್. ವೀರಮ್ಮ ರೇಖ, ಎಂ. ಜ್ಯೋತಿ, ಸುನಿತಾ, ಬೇಬಿ, ಇ. ಲಕ್ಷ್ಮಿ, ನೀಲಮ್ಮ ಬಿ. ಗೀತಾ, ಶಾಜದಾ, ಎಚ್. ವೀರಮ್ಮ ಮತ್ತು ಶೋಭ. ಶ್ರೀಮತಿ ನಾಗರತ್ನರವರು ತರಬೇತಿಯನ್ನು ಕೊಡುತ್ತಿರುವ ಉಪಾಧ್ಯಾಯಿನಿ.






Scanned by CamScanner

# ಸ್ವಾತಂತ್ರ್ಯೋತ್ಸವ



**ಬೋಲೋ ಭಾರತ್ ಮಾತಾ ಕೀ-ಜೈ**

1947ರ ಆಗಸ್ಟ್ 14ರ ರಾತ್ರಿ ನಮ್ಮ ಭವ್ಯ ಭಾರತ ರಾಷ್ಟ್ರ ಸ್ವತಂತ್ರವಾಯಿತು. ನೆಲ ನಮ್ಮದು, ಜಲ ನಮ್ಮದು, ಉಸಿರಾಡುವ ಗಾಳಿ ನಮ್ಮದಿದ್ದು ನಮ್ಮನ್ನು ಆಳುವವರು ಬ್ರಿಟೀಷರೆ ಎಂದೂ ದಂಗೆ ಎದ್ದು ನಮ್ಮ ಹಿರಿಯರು ತಂದು ಕೊಟ್ಟಂತಹ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಸ್ಥೆಯ ಆವರಣದಲ್ಲಿ ಗೌರವಾನ್ವಿತವಾಗಿ ನಮ್ಮ ಉಚಿತ ವಿದ್ಯಾರ್ಥಿನಿಲಯದ ಮಕ್ಕಳೊಂದಿಗೆ ಆಚರಿಸಿ ಸಿಹಿ ಹಂಚಿ ಸಂತೋಷಿಸಲಾಯಿತು. ಧ್ವಜಾರೋಹಣ ಕಾರ್ಯಕ್ರಮವನ್ನು ರೆ|| ಫಾ|| ಹೆನ್ರಿಯವರು ನೆರವೇರಿಸಿದರು. ಸ್ವಾತಂತ್ರ್ಯೋತ್ಸವದ ಬಗ್ಗೆ ರೆ|| ಫಾ|| ನೆಲ್ಸನ್‌ರವರು ಮಾತನಾಡಿದರು. ನೆರೆದಿದ್ದ ಎಲ್ಲಾ ಜನರಿಗೆ ವಿವಿಧ ಆಟೋಟ ಸ್ಪರ್ಧೆಗಳನ್ನು ಹಮ್ಮಿಕೊಂಡು ವಿಜೇತರಿಗೆ ಬಹುಮಾನ ವಿತರಿಸಲಾಯಿತು.

Scanned by CamScanner

# Independence Day




Bolo Bharat Mata Ki Jai

On August 15, 2002, we celebrated the Independence day with all solemnity at our institute. Fr. Henry hoisted the tricolour and Fr. Nelson gave away the sweets and the prizes to the winners in different sports events conducted on the day.


Scanned by CamScanner

# Tuition Classes



Tuition programme at Hadagali

Tuition programme was held from July 2002 to March 2003 in the Carmel Seva Sadan campus, Hadagali. About 17 students of 8th, 9th and 10th std. participated in this. We are happy to say that 16 of these passed their respective exams. Thanks to our tutor Gurubasavaraj, B.Sc.,B.Ed.



Tuition programme at Mahajanada Halli

For the first time the tuition programme was started in Mahajanada village, on 3-10-2002. 30 students participated in it. The classes were held in throughout the month of October.




Scanned by CamScanner

# ಟ್ಯೂಷನ್ ಕ್ಲಾಸಸ್



ಹಡಗಲಿಯಲ್ಲಿ ಟ್ಯೂಷನ್ ತರಬೇತಿ

ಹಡಗಲಿಯ ಕಾರ್ಮೆಲ್ ಸೇವಾ ಸದನದ ವಠಾರದಲ್ಲಿ, ಎಂಟು, ಒಂಭತ್ತು ಮತ್ತು ಹತ್ತನೇ ತರಗತಿಯ ಮಕ್ಕಳಿಗೆ ಜೂಲೈ 2002ರಿಂದ ಮಾರ್ಚ್ 2003ರವರೆಗೆ ವರ್ಷವಿಡೀ ಟ್ಯೂಷನ್ ತರಬೇತಿಯನ್ನು ಏರ್ಪಡಿಸಿದ್ದೆವು. ಇಲ್ಲಿ 17 ಮಂದಿ ವಿದ್ಯಾರ್ಥಿಯರು ಇದರ ಉಪಯೋಗವನ್ನು ಪಡೆದುಕೊಂಡರು. ಅಧ್ಯಾಪಕ ಗುರು ಬಸವರಾಜ್ (ಬಿಎಸ್ಸಿ, ಬಿಎಡ್) ಈ ಟ್ಯೂಷನ್ ಹೇಳಿಕೊಟ್ಟರು. ಈ 17 ಮಂದಿಯಲ್ಲಿ 16 ಮಂದಿ ಒಳ್ಳೆಯ ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಾರೆ ಎಂದು ಹೇಳಲು ನಮಗೆ ಬಹಳ ಸಂತೋಷವಾಗುತ್ತಿದೆ. ಈ ಟ್ಯೂಷನ್ ತರಬೇತಿ ನಡೆಸಿದ ಗುರು ಬಸವರಾಜ್‌ರವರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು.




ಟ್ಯೂಷನ್ ತರಗತಿ, ಮಹಾಜನದ ಹಳ್ಳಿ

ಪ್ರಥಮ ಬಾರಿಗೆ, ಹಡಗಲಿಯಿಂದ 23 ಕಿ.ಮೀ. ದೂರವಿರುವ ಮಹಾಜನದ ಹಳ್ಳಿಯಲ್ಲಿ, ತಾ. 3.10.2002ರಲ್ಲಿ ಆರಂಭಿಸಿದೆವು. ಇಲ್ಲಿ 30 ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಟ್ಯೂಷನ್‌ನಲ್ಲಿ ಭಾಗವಹಿಸಿದರು. ಈ ಕಾರ್ಯಕ್ರಮವನ್ನು ಅಕ್ಟೋಬರ್ ಇಡೀ ತಿಂಗಳು ನಡೆಸಿದೆವು.

Scanned by CamScanner

# ಟ್ಯೂಷನ್ ಕ್ಲಾಸಸ್



**ತಲಾಕಲ್‌ನಲ್ಲಿ ಟ್ಯೂಷನ್ ತರಬೇತಿ**

ಹಡಗಲಿಯಿಂದ ಸುಮಾರು 21 ಕಿ.ಮೀ. ದೂರದಲ್ಲಿರುವ ತಲಕಲ್ ಗ್ರಾಮದಲ್ಲಿ ತಾ. 10.2.2003 ರಂದು ಟ್ಯೂಷನ್ ಆರಂಭಿಸಿದೆವು. ಇಲ್ಲಿ 13 ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪಾಲ್ಗೊಂಡರು. ಗಣಿತ, ವಿಜ್ಞಾನ ಮತ್ತು ಇಂಗ್ಲೀಷ್ ವಿಷಯಗಳಲ್ಲಿ ಅಧ್ಯಾಪಕ ಕರಿಯಪ್ಪರವರು ಟ್ಯೂಷನ್ ಹೇಳಿಕೊಟ್ಟರು.

**ಹುಗ್ಲೂರಿನಲ್ಲಿ ಟ್ಯೂಷನ್ ತರಬೇತಿ**

ಹುಗ್ಲೂರು ಗ್ರಾಮವು ಹಡಗಲಿಯಿಂದ 7 ಕಿ.ಮೀ. ದೂರದಲ್ಲಿದೆ. ಇಲ್ಲಿಯೂ ನಾವು ಎಸ್.ಎಸ್.ಎಲ್.ಸಿ. ಓದುತ್ತಿರುವವರಿಗೆ ಹಾಗೂ ಅನುತ್ತೀರ್ಣರಾಗಿ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿದ ವಿದ್ಯಾರ್ಥಿ/ನಿಯರಿಗೆ ಟ್ಯೂಷನ್ ಕಾರ್ಯಕ್ರಮವನ್ನು ತಾ. 20.2.2003ರಿಂದ 17.3.2003ರವರೆಗೆ ನಡೆಸಿದೆವು. ಸ॥ ಆನಂದ್‌ರವರು ಇಂಗ್ಲೀಷ್ ವಿಷಯದಲ್ಲೂ ಮತ್ತು ಶ್ರೀ ಮಂಜು (ಬಿ.ಎಸ್ಸಿ., ಬಿ.ಎಡ್.) ಗಣಿತ ಹಾಗೂ ವಿಜ್ಞಾನ ವಿಷಯಗಳಲ್ಲೂ ಟ್ಯೂಷನ್ ಹೇಳಿಕೊಟ್ಟರು. ಒಟ್ಟು 17 ಮಂದಿ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.



Scanned by CamScanner

# Tuition Classes



## Tuition programme at Thalakal

Tuition programme was begun on 10.02.2003 at Thalakal, which is 21 km. away from Hadagali. 13 students participated in it. Mr. Kariyappa was the tutor who helped out in Maths, Science and English subjects.

## Tuition programme at Huglur

Tuition programme was held in Huglur which is about 7 km. from Hadagali from 20-02-2003 to 17-03-2003. About 17 SSLC students and dropout participated in it. Br. Anand and Mr. Manju, B.Sc.,B.Ed. were the tutors.



Scanned by CamScanner

# Girl Child Scholarship



Education Scheme to Girls: Having identified girls from th economically backward families, around Huvinahadagali town, w have provided them with uniform, school fees and books. 2 students have benefited under this scheme last year. Some girl and boys from villages who are willing to continue their studies i the towns have been helped to pay for their monthly bu pass and the college fees.

Scanned by CamScanner

# ವಿದ್ಯಾರ್ಥಿನಿಯರಿಗೆ ಸ್ಫೂರ್ತಿ




ನಮ್ಮ ಕಾರ್ಮೆಲ್ ಸೇವಾಸದನದ ಅಡಿಯಲ್ಲಿ ಸುತ್ತಲು ಇರುವ ಕೆಲವು ಹಳ್ಳಿಗಳಿಂದ ಆರ್ಥಿಕವಾಗಿ ಹಿಂದುಳಿದಿರುವ ಕುಟುಂಬಗಳಲ್ಲಿಯ ಹೆಣ್ಣುಮಕ್ಕಳನ್ನು ಗುರ್ತಿಸಿ, ಅವರಿಗೆ ಸಮವಸ್ತ್ರ, ಶಾಲಾ ಶುಲ್ಕ, ಪುಸ್ತಕ ವ್ಯವಸ್ಥೆಯನ್ನು ಮಾಡಿರುವೆವು. ಈ ಯೋಜನೆಯಿಂದ 21 ವಿದ್ಯಾರ್ಥಿನಿಯರು ಕಳೆದ ವರ್ಷ ಸೌಲಭ್ಯ ಪಡೆದಿದ್ದಾರೆ. ನಾವು ಕೊಡುವ ಈ ಮೇಲಿನ ಸೌಲಭ್ಯಗಳಿಂದ ಕುಟುಂಬಕ್ಕೆ ತುಂಬಾ ಅನೂಕೂಲವಾಗಿದೆ ಎಂದು ಗ್ರಾಮ ನಿವಾಸಿಗಳು ಹೇಳುತ್ತಾರೆ. ಹಳ್ಳಿಯ ಹೆಣ್ಣು ಮಕ್ಕಳನ್ನು ಓದಿಸುವುದು ತುಂಬಾ ವಿರಳ, ಏಕೆಂದರೆ 'ಓದಿದ ನಂತರ ಗಂಡನ ಮನೆಗೆ ಹೋಗುವವರು' ಎನ್ನುವಂತಹ ಅಭಿಪ್ರಾಯ ಸರ್ವೇಸಾಮಾನ್ಯ. ಇಂತಹ ಪರಿಸ್ಥಿತಿಯಲ್ಲಿ ನಾವು ಅವರಿಗೆ ತಿಳಿಹೇಳಿ ಈ ಯೋಜನೆಯ ಮೂಲಕ ಶಿಕ್ಷಣಕ್ಕೆ ಪ್ರೇರೇಪಿಸಿದ್ದೇವೆ, ಉತ್ತಮವಾಗಿ ಅಭ್ಯಾಸ ಮಾಡುವಂತೆ ಮಾಡಿದ್ದೇವೆ. ಇನ್ನೂ ಕೆಲವರಿಗೆ ಅಂದರೆ ಎಸ್.ಎಸ್.ಎಲ್.ಸಿ.ಯ ನಂತರದ ಅಭ್ಯಾಸಕ್ಕೆ ಹಳ್ಳಿಗಳಿಂದ ದೂರ ಪ್ರದೇಶಗಳಿಗೆ ಓದುವುದಕ್ಕೆ ಬರುವಂತಹ ಬಡ ಮಕ್ಕಳನ್ನು ಗುರ್ತಿಸಿ ಅವರಿಗೆ ಸಾರಿಗೆ ವ್ಯವಸ್ಥೆ (ಬಸ್ ಪಾಸ್), ಕಾಲೇಜ್ ಶುಲ್ಕವನ್ನು ಕೊಟ್ಟಿದ್ದೇವೆ. ಇಲ್ಲವಾದಲ್ಲಿ ಅಂತಹವರ ಶಿಕ್ಷಣ ಮಟುಕುಗೊಳಿಸುವ ಸಾಧ್ಯತೆಗಳು ಇವೆ.

Scanned by CamScanner

# ಗಣರಾಜ್ಯೋತ್ಸವ

ದೇಶದಲ್ಲಿ ಸುವ್ಯವಸ್ಥಿತವಾಗಿ ಬದುಕಲು ಒಂದು ಸುಂದರವಾದ ವ್ಯವಸ್ಥೆ ಬೇಕು. ರೀತಿ ನೀತಿಯಿಂದ ಬದುಕು ಹಸನಾಗುತ್ತದೆ. ಅಂತೆಯೇ 54 ವರ್ಷಗಳ ಹಿಂದೆ ನಮ್ಮ ಸಂವಿಧಾನ ರೂಪುಗೊಂಡು ದೇಶದ ಪ್ರಗತಿಗೆ ನಾಂದಿಯಾಯಿತು. ಮಾನ್ಯ ರಾಜೇಂದ್ರ ಪ್ರಸಾದ್ ಮತ್ತು ಅಂಬೇಡ್ಕರ್‌ರವರು ಅಧ್ಯಕ್ಷತೆಯಲ್ಲಿ ನಮ್ಮ ದೇಶದ ಕಾನೂನು ನಿರ್ಮಿಸಿದ ದೇಶದ ಮಹಾನ್ ನಾಯಕರನ್ನು ಸ್ಮರಿಸಿ ಅಂದು ಧ್ವಜಾರೋಹಣ ಕಾರ್ಯವನ್ನು ಕುಮಾರಿ ಅನ್ನ ಆಸ್ಪ್ರಿಯಾರವರಿಂದ ನೆರವೇರಿಸಲಾಯಿತು. ನಂತರ ನಮ್ಮ ವಿದ್ಯಾರ್ಥಿಗಳು ರಾಷ್ಟ್ರಗೀತೆಯನ್ನು ಹಾಡಿ ವಂದನೆ ಸಲ್ಲಿಸಲಾಯಿತು. ಫಾ।। ಹೆನ್ರಿ ಮೊರಾಸ್, ಫಾ।। ವಿಲಿಯಂರವರೂ ಉಪಸ್ಥಿತರಿದ್ದು ಕಾರ್ಯಕ್ರಮ ನೆರವೇರಿಸಿದರು.

**ಜೈ ಕರ್ನಾಟಕ ಮಾತೆ**




Scanned by CamScanner

# Republic Day

Bharat Mata Ki Jai

Republic Day was celebrated fittingly, saluting the national flag and singing the national anthem along with our hostel students and the local people on 26-01-03. The Benefactor of CSS Miss Anna of Austria hoisted the flag and addressed the Audience.




Scanned by CamScanner

# Christmas



Christmas 2002: Along with all the people of different faiths around, we celebrated Christmas 2002 and gave witness to communal harmony in the locality. The day was marked with Eucharistic celebration, followed by a cultural programme of dances and drama from different groups of our neighborhood. Winners were awarded with the prizes.



Scanned by CamScanner

# ಕ್ರಿಸ್ಮಸ್



ವಿಶ್ವದಲ್ಲಿ ವಿಶ್ವಾಸನೀಯ ಯುಗ ಪುರುಷ ಹುಟ್ಟಿದ ಈ ದಿನವನ್ನು ಪೂಜೆಯೊಂದಿಗೆ ಸುತ್ತಗ್ರಾಮದ ನಾಗರೀಕರ ಸಂಗಡ ಹರ್ಷಚಿತ್ತವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಹಾಗೂ ವಿದ್ಯಾರ್ಥಿಗಳ ಕ್ರೀಡಾ ಚಟುವಟಿಕೆ, ಹಾಗೂ ಹಳ್ಳಿಗಳಿಂದ ಬಂದ ಮಹಿಳಾ ತರಬೇತಿ ಕೇಂದ್ರದ ಮಹಿಳೆಯರ ಹಾಡು, ನೃತ್ಯ, ಕುಣಿತಗಳಿಂದ ಹರ್ಷಚಿತ್ತರಾಗಿ ಆಚರಿಸಿ ಎಲ್ಲರೂ ಮಹಾ ಮಹಿಮನಾದ ಮಹಾ ಪ್ರಭು ಯೇಸುವಿಗೆ ಗೌರವವನ್ನು ಅರ್ಪಿಸಿ ಪುನೀತರಾದೆವು. 'ನೀ ಬದುಕುವ ನೆಲವೊಂದೇ, ನೀ ಸೇವಿಸುವ ಗಾಳಿಯು ಒಂದೇ, ಕುಡಿಯುವ ನೀರು ಒಂದೇ; ಇಂತಿರಲು ಕುಲಗೋತ್ರಗಳು ಎತ್ತಣವಯ್ಯ' ಎನ್ನುವ ಮೂಲಕ ಸಂತೋಷಮಯವಾಗಿ ಹಬ್ಬವನ್ನು ಆಚರಿಸಿದೆವು.





Scanned by CamScanner

# ವಾಹನ ಚಾಲಕರ ತರಬೇತಿ ಕೇಂದ್ರ










ಹೂವಿನ ಹಡಗಲಿಯ ಸುತ್ತಮುತ್ತಲೂ ಕೂಡ ವಾಹನ ಚಾಲಕರ ತರಬೇತಿ ಕೇಂದ್ರಗಳು ಇರುವುದಿಲ್ಲ. ಈ ಕಾರಣ ಚಾಲಕರ ತರಬೇತಿ ಕೇಂದ್ರವನ್ನು ಹಡಗಲಿಗೆ ತರಲು ಬಹಳವಾಗಿ ಶ್ರಮಿಸಿದೆವು. ಇದರಲ್ಲಿ ನಮಗೆ ಎಲ್ಲಾ ರೀತಿಯಿಂದಲೂ ಪ್ರೊ॥ ಕಾಲವಾಡಿ ಮಠದವರು ಹಾಗೂ ಸಿ.ಪಿ.ಐ. ಸಾಹೇಬರಾದ ಬಾದವಾಡಗಿ ಯವರೂ ಹಾಗೂ ರಸ್ತೆ ಚಾಲನ ಅಧಿಕಾರಿಗಳಾದ ಶೆಖಾಜಿಯವರು ಹಾಗೂ ಅವರ ಇಲಾಖೆಯ ಅಧಿಕಾರಿ ವೃಂದದವರೂ ನಮಗೆ ಸಹಾಯವನ್ನು ಮಾಡಿದರು. ಅವರನ್ನು ಸ್ಮರಿಸದೆ ಹೋದರೆ ವಿಫಲವಾದೀತು. ನಾವು ಕಾರ್ಮೆಲ್ ಸೇವಾ ಸದನದ ವತಿಯಿಂದ ವಾಹನ ಚಾಲಕರ ತರಬೇತಿ ಕೇಂದ್ರದಲ್ಲಿ ಕಡಿಮೆ ದರದಲ್ಲಿ ಚಾಲಕರ ತರಬೇತಿಯನ್ನು ಕೊಡುತ್ತಿದ್ದೇವೆ. ಹಾಗೂ ಚಾಲಕರಾಗಿ ತಯಾರಾದಂತಹವರಿಗೆ ಅವರ ಮುಂದಿನ ಬಾಳಿಗೆ ಅನುಕೂಲವಾಗಲು ತರಬೇತಿ ಪ್ರಮಾಣಪತ್ರವನ್ನು ಹಾಗೂ ಪರವಾನಿಗೆಯನ್ನು ಕೂಡ ಕೊಡುತ್ತಿದ್ದೇವೆ. ಉದ್ಯೋಗ ಅರಸಿ ಊರೂರು ಸುತ್ತುವ ನಿರುದ್ಯೋಗಿ ಯುವಕರಿಗೆ ಇದು ಅನೂಕೂಲವಾಗಿದೆ. ನಮ್ಮ ಸಂಸ್ಥೆಯ ಆವರಣದಲ್ಲಿ ಪ್ರತಿ ತಿಂಗಳು 4ನೇ ಬುಧವಾರ ಆರ್.ಟಿ.ಓ. ಶಿಬಿರ ಕೂಡ ಇರುತ್ತದೆ. ದ್ವಿಚಕ್ರವಾಹನ, ಮತ್ತು ಕಾರ್, ಜೀಪ್, ಇನ್ನೂ ಮುಂತಾದ ಲಘು ವಾಹನಗಳನ್ನು ಓಡಿಸುವ ಕಾರ್ಯದಿಂದ ಜೀವನ ಸಾಗಿಸಲು ಇದು ಕೂಡ ಸ್ವಂತ ಉದ್ಯೋಗವಾಗುತ್ತದೆ ಎಂದೂ ನಮ್ಮ ಅಭಿಪ್ರಾಯ.

Scanned by CamScanner

# Carmel Motor Driving School










In the premises of Carmel Seva Sadan, the Carmel Motor Driving School was inaugurated on April 8, 2003 by A.R.T.O. Mr. Shekagi Hospet. Rev. Fr. Archibald Gonsalves OCD, the Vicar Provincial of Karnataka-Goa Province was the president of the special function. A host of Chief Guests such as MLA of Hadagali-Nandihalli Halappa, Badavadagi, the CPI, Prof. Kalavadamath, Nagabhushan Hospet and Chandrappa, President of Lions Club graced this occasion.




Scanned by CamScanner


# On Their Feet




Life was always a struggle in terms of economy. But after having undergone training in Carmel Tailoring Centre, the unemployed women now have the joy of being self-dependent. They are self-employed as tailors in their own houses.












Scanned by CamScanner

# On Their Feet


















Scanned by CamScanner


# ಸ್ವ – ಉದ್ಯೋಗಭರಿತರಾದವರು







ಕಾರ್ಮೆಲ್ ಹೊಲಿಗೆ ತರಬೇತಿ ಕೇಂದ್ರದಲ್ಲಿ ತರಬೇತಿಯನ್ನು ಪಡೆದು ಸ್ವ–ದುಡಿತದಲ್ಲಿ ನಿರತರಾಗಿರುವ ಮಹಿಳೆಯರು.









Scanned by CamScanner


# ಸ್ವ – ಉದ್ಯೋಗಭರಿತರಾದವರು
















Scanned by CamScanner


# ಕಾರ್ಮೆಲ್ ಸೇವಾ ಸದನದಿಂದ
# ಗ್ರಾಮಸ್ಥರಿಗೆ ಆರೋಗ್ಯ ಭಾಗ್ಯ

ಹಡಗಲಿ ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ದವಾಖಾನೆಗಳಿಲ್ಲ, ಕೆಲವೆಡೆ ಇದ್ದರೂ ಸರಿಯಾಗಿ ನಡೆಯುತ್ತಿಲ್ಲ, ಗ್ರಾಮಸ್ಥರು ಅನಾರೋಗ್ಯಕ್ಕೊಳಗಾದಾಗ ದೂರದ ನಗರಕ್ಕೆ ಹೋಗಿ ವೈದ್ಯರ ಭೇಟಿ ಮಾಡಿ ಕಾಯಿಲೆಗೆ ಔಷಧಿ ಪಡೆಯುವ ಶಕ್ತಿ ಈ ಬಡ ಜನಕ್ಕಿಲ್ಲ, ಆರ್ಥಿಕ ತೊಂದರೆಯಿಂದ ಬಳಲುವ ಜನರಿಗೆ ನಗರದ ದವಾಖಾನೆ ಕನಸಿನ ಮಾತು. ಶಾರೀರಿಕ ಅನಾರೋಗ್ಯವನ್ನು ನಾಡ ಮದ್ದಿನಿಂದಾದರೂ ವಾಸಿಪಡಿಸುತ್ತಾರೆ. ಆದರೆ ಹಲ್ಲು ರೋಗವನ್ನು ನಿವಾರಿಸುವುದಂತು ಹೇಗೆ? ನೀರಿನ ದೋಷದಿಂದ ಅನೇಕ ಗ್ರಾಮಸ್ಥರು ಹಲ್ಲುನೋವುಗಳಿಗೆ ತುತ್ತಾಗಿ ನರಳುತ್ತಿದ್ದಾರೆ. ಇದನ್ನರಿತ ಕಾರ್ಮೆಲ್ ಸೇವಾ ಸದನವು ಉಚಿತ ಹಲ್ಲಿನ ತಪಾಸಣ ಹಾಗೂ ಚಿಕಿತ್ಸಾ ಶಿಬಿರವನ್ನು ಹಳ್ಳಿಗಳಲ್ಲಿಯೇ ಏರ್ಪಡಿಸಲು ಯೋಚಿಸಿತು. ಹಡಗಲಿಯಿಂದ 80 ಕಿ.ಮೀ. ದೂರವಿರುವ ದಾವಣಗೆರೆ ಬಾಪೂಜಿ ದಂತ ಕಾಲೇಜಿನ ವೈದ್ಯರ ತಂಡದ ಮುಖ್ಯಸ್ಥರಾದ ಡಾ. ರಮೇಶ್ ಮತ್ತು ಬಳಗದವರ ಸಹಾಯದಿಂದ ಉಚಿತ ದಂತ ತಪಾಸಣಾ ಹಾಗೂ ಚಿಕಿತ್ಸಾ ಶಿಬಿರವನ್ನು ಏರ್ಪಡಿಸಲು ಯೋಚಿಸಿದೆವು. ಬಾಪೂಜಿ ದಂತ ಕಾಲೇಜಿನ ವೈದ್ಯರ ತಂಡವು ಉಚಿತ ಸೇವೆಯನ್ನು ಮಾಡಿದರೆ, ಕಾರ್ಮೆಲ್ ಸೇವಾ ಸಮಾಜ ಸಂಸ್ಥೆಯು ಶಿಬಿರಕ್ಕೆ ಬೇಕಾದ ಸಿದ್ಧತೆ, ಊಟ ಉಪಚಾರ, ರೋಗಿಗಳಿಗೆ ಔಷಧಿಯನ್ನು ದಾನಿಗಳ ಸಹಾಯದಿಂದ ಒದಗಿಸಿ ಕೊಡುತ್ತದೆ. ಕಳೆದ ಮೂರು ತಿಂಗಳಲ್ಲಿ ಮೂರು ಹಳ್ಳಿಗಳಲ್ಲಿ ಮೂರು ಸಲ ಉಚಿತ ದಂತ ತಪಾಸಣ ಮತ್ತು ಚಿಕಿತ್ಸಾ ಶಿಬಿರವನ್ನು ಏರ್ಪಡಿಸಲಾಯಿತು. ಈ ಶಿಬಿರವನ್ನು ಏರ್ಪಡಿಸಲು ಸಹಕರಿಸಿದ ಗ್ರಾಮಸ್ಥರಿಗೂ, ಬಾಪೂಜಿ ದಂತ ಕಾಲೇಜಿನ ವೈದ್ಯರ ತಂಡಕ್ಕೆ ಸಹಕಾರ ನೀಡಿದ ಎಲ್ಲರಿಗೂ ನನ್ನ ಧನ್ಯವಾದಗಳು.



Scanned by CamScanner

# ತಲಕಲ್ ಗ್ರಾಮದಲ್ಲಿ ಉಚಿತ ದಂತ ತಪಾಸಣಾ ಹಾಗೂ ಚಿಕಿತ್ಸಾ ಶಿಬಿರ





ತಾರೀಖು 4.3.2002ರಂದು ಕಾರ್ಮೆಲ್ ಸೇವಾ ಸದನ ಸಮಾಜ ಸೇವಾ ಸಂಸ್ಥೆ, ಹಡಗಲಿ ತಾಲೂಕಿನ ತಲ್‌ಕಲಾ ಗ್ರಾಮದಲ್ಲಿ ಬಾಪೂಜಿ ದಂತ ಕಾಲೇಜು, ದಾವಣಗೆರೆ ಇವರ ನೆರವಿನಿಂದ ಉಚಿತ ದಂತ ತಪಾಸಣಾ ಮತ್ತು ಚಿಕಿತ್ಸಾ ಶಿಬಿರವನ್ನು ಏರ್ಪಡಿಸಲಾಯಿತು. ತಲ್‌ಕಲ್ ಗ್ರಾಮದ ಸ್ನೇಹ ಸ್ವಸಹಾಯ ಯುವಕ ಸಂಘದವರ ಸಹಕಾರದಿಂದ ಈ ಶಿಬಿರವು ಯಶಸ್ವಿಯಾಗಿ ನಡೆಯಿತು. 241 ರೋಗಿಗಳು ಇದರ ಉಪಯೋಗವನ್ನು ಪಡೆದುಕೊಂಡರು. ಶಿಬಿರದ ನಂತರ ವೈದ್ಯಕೀಯ ಸೇವೆಯನ್ನು ಕೊಡಲು ಬಂದ ವೈದ್ಯ ತಂಡದವರಿಗೆ ನೆನಪಿನ ಕಾಣಿಕೆ ಕೊಡಲಾಯಿತು.






Scanned by CamScanner

# Medical Aid From Carmel Seva Sadan

*In the interior places of Hadagali taluk there are hardly any medical clinics. The ones available are far from being efficient. The sick and ailing villagers cannot afford to rush to the town for treatment because these are beyond their means. For most of the illnesses they take refuge in herbal, indigenous medicines. But the ever-increasing complications of dentistry, worsened by the contaminated water have had no such herbal solutions. No one knows better than these villagers that what cannot be cured should be endured.*

*Carmel Seva Sadan, realizing the urgency of the situation decided to conduct a free dental camp. The enthusiasm and the management of the camp by the Carmel Seva Sadan was amply awarded by the professional team of Bapuji Dental College, Davanagere. Well wishers have made possible the supply of necessary medicines. In the last 3 months, 3 camps have been conducted in 3 villages. We remain grateful to all those who made it possible.*



Scanned by CamScanner

# Free Dental Camp in Talkal





On 4-3-2002 free dental camp was conducted in Talkal with the help of Bapuji Dental College, Davanagare. The camp was quite successful as 241 patients benefited from its. The medical team was honored worth mementos. We are grateful to the Sneha self-help youth group, Talkal.





Scanned by CamScanner

# Free Dental Camp in Mudenur






On 24-03-2003 another free dental camp was conducted in Mudenur. Sri Basavaraj, the ex-Gram Panchayat President of Mudenur, inaugurated the camp. Bapuji Dental College put their expertize yet again into use. Dr. Mamatha and Dr. Vasudha gave instructions on the importance and manner of maintaining teeth. About 243 people profitted from the camp.





Scanned by CamScanner

# ಮುದೆನೂರು ಗ್ರಾಮದಲ್ಲಿ ಉಚಿತ ದಂತ ತಪಾಸಣಾ ಹಾಗೂ ಚಿಕಿತ್ಸಾ ಶಿಬಿರ





ಕಾರ್ಮೆಲ್ ಸೇವಾ ಸದನ, ಹಡಗಲಿ ಇದರ ವತಿಯಿಂದ ಮುದೆನೂರು ಗ್ರಾಮದಲ್ಲಿ ತಾರೀಖು 24.3.2003ರಂದು ಉಚಿತ ದಂತ ತಪಾಸಣಾ ಮತ್ತು ಚಿಕಿತ್ಸಾ ಶಿಬಿರವನ್ನು ಏರ್ಪಡಿಸಲಾಯಿತು. ದಾವಣಗೆರೆ ಬಾಪೂಜಿ ದಂತ ಕಾಲೇಜಿನ ವೈದ್ಯರ ತಂಡ ಈ ಶಿಬಿರವನ್ನು ನೆರವೇರಿಸಿ ಕೊಟ್ಟರು. ಮುದೆನೂರು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರಾದ ಬಸವರಾಜರವರು ಶಿಬಿರವನ್ನು ಉದ್ಘಾಟಿಸಿದರು. ಡಾ. ಮಮತಾ ಮತ್ತು ವಸುಧಾ ಹಲ್ಲನ್ನು ಯಾವ ರೀತಿ ಆರೋಗ್ಯವಾಗಿಡಬಹುದು ಎಂಬ ಮಾಹಿತಿ ಕೊಟ್ಟರು. ಈ ಶಿಬಿರದಿಂದ 243 ಜನರು ಉಪಯೋಗ ಪಡೆದುಕೊಂಡರು.







Scanned by CamScanner

# ಸೋಗಿ ಗ್ರಾಮದಲ್ಲಿ ಉಚಿತ ದಂತ ತಪಾಸಣಾ ಹಾಗೂ ಚಿಕಿತ್ಸಾ ಶಿಬಿರ







ಮೇ ತಿಂಗಳ 12ನೇ ತಾರೀಖಿನಂದು ಹಡಗಲಿ ತಾಲೂಕಿನಲ್ಲಿ 12 ಕಿ.ಮೀ. ದೂರವಿರುವ ಸೋಗಿ ಗ್ರಾಮದಲ್ಲಿ ಉಚಿತ ದಂತ ತಪಾಸಣ ಹಾಗೂ ಚಿಕಿತ್ಸಾ ಶಿಬಿರವನ್ನು ಏರ್ಪಡಿಸಲಾಯಿತು. ಗ್ರಾಮದ ವಿಶ್ವನಾಥರವರು ಹಾಗೂ ಗ್ರಾಮಸ್ಥರ ಸಹಕಾರದಿಂದ ಈ ಶಿಬಿರವು ಬೆಳಿಗ್ಗೆ 10.30ಕ್ಕೆ ದೀಪ ಉರಿಸುವ ಮೂಲಕ ಆರಂಭಿಸಲಾಯಿತು. ದಾವಣಗೆರೆಯ ಬಾಪೂಜಿ ದಂತ ಕಾಲೇಜಿನ ವೈದ್ಯರ ತಂಡ ಈ ಶಿಬಿರವನ್ನು ನಡೆಸಿಕೊಟ್ಟರು. ಶಿಬಿರದ ಪ್ರಯೋಜನವನ್ನು 120 ಮಂದಿ ಪಡೆದುಕೊಂಡರು.








Scanned by CamScanner

# Free Dental Camp in Sogi







On 12-05-2003 one more free dental camp was conducted in Sogi village. This village is 12 km. away from the town. Thanks to the co-operation of the villagers, especially Mr. Vishwanath. The camp was a big success. A team of Doctors from Bapuji Dental College, Davanagere treated the patients. About 120 members benefited from this camp.






Scanned by CamScanner

# Sports & Games



On 22-12-2002 CSS had arranged sports and games competition to the Hadagali and neibouring villages' children and youth. Winners were awarded with prizes.








Scanned by CamScanner

# Youth Empowerment



'Today's youth tomorrow's strength'. In the present world of globalization we need youth like Nethaji, Bhagavatsing to have peace and prosperity. Hence the C.S.S. has started various groups of youth for the upliftment of the society. Educational activities, Cleanliness, Plantation of trees, Health awarness camps, etc. are some of the youth empowerment projects. To reach the goal we need youth full of vigour and love for the society.



Scanned by CamScanner






# ಆಟೋಟ ಸ್ಪರ್ಧೆಗಳು



ತಾ|| 22–12–2002ರಂದು ಹಡಗಲಿ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಮಕ್ಕಳಿಗೆ ವಿವಿಧ ಆಟೋಟ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಯಿತು. ವಿಜೇತ ಮಕ್ಕಳಿಗೆ ಬಹುಮಾನಗಳನ್ನು ಕೊಟ್ಟು, ಪ್ರೋತ್ಸಾಹಿಸಲಾಯಿತು.








Scanned by CamScanner

# ಯುವ ಶಕ್ತಿಯೇ ಸಮಾಜದ ಶಕ್ತಿ



ಕೋಮು ದಳ್ಳುರಿಯಲ್ಲಿ ಬೆಂದು ಹೋಗಿರುವ ಈ ಸಮೃದ್ಧ ಭಾರತ ಮಾತೆಯ ಒಡಲು ಉರಿದು ಹೋಗಿದೆ. ನೆಲೆ ಶಾಂತಿ ಸುಖ ಕಾಣಬೇಕಾದರೆ ನೇತಾಜಿ, ಭಗವತ್ ಸಿಂಗ್‌ರಂತಹ ಯುವಕರ ಪಡೆ ಬೇಕಾಗಿದೆ. ಇದನ್ನರಿತು ಗ್ರಾಮ ಗ್ರಾಮಗಳನ್ನು ಸುತ್ತಿ ತರುಣರನ್ನು ಒಗ್ಗೂಡಿಸಿ ಸ್ಫೂರ್ತಿ ತುಂಬಿ ಸಂಘಟನೆ ಮೂಲಕ ದೇಶದ ಪ್ರಗತಿಗೆ ನಾಂದಿ ಹಾಡಬೇಕಾಗಿದೆ. ಕಾರಣ ತಾಲೂಕಿನ ಕೆಲವು ಹಳ್ಳಿಗಳಲ್ಲಿ ಈಗಾಗಲೇ 3 ಸಂಘಗಳನ್ನು ರಚಿಸಿದ್ದೇವೆ, ಇನ್ನೂ ರಚಿಸುವ ಯೋಜನೆಯಲ್ಲಿದ್ದೇವೆ. ಸಮಸ್ತ ಅಭಿವೃದ್ಧಿಗೂ ಯುವಕರ ಪಡೆ ಅವಶ್ಯಕ. ಗ್ರಾಮಸ್ವಚ್ಛತಾ ಕಾರ್ಯಕ್ರಮ, ತಿಳುವಳಿಕೆ ಕಾರ್ಯಕ್ರಮ, 'ಗ್ರಾಮಾಭಿವೃದ್ಧಿಗೆ ವನಸಿರಿ' ಇನ್ನೂ ಮುಂತಾದ ಕಾರ್ಯಕ್ರಮಗಳನ್ನು ಯುವಕರ ಪಡೆಗಳ ಮೂಲಕ ಮಾಡುವುದಿದೆ. ಅಭಿವೃದ್ಧಿ ಅಂಗವಾಗಿರುವ ಯುವಕ ಪಡೆಗಳನ್ನು ರಚಿಸಿ ಸಾಹಸದ ಕೆಲಸವನ್ನು ಮಾಡುವ ತವಕದಲ್ಲಿದ್ದೇವೆ. ಗ್ರಾಮದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಮವಸ್ತ್ರ ಶಿಸ್ತಿನಿಂದ ಸಂಘಟಕರೆಲ್ಲ ಸೇರಿ ಗ್ರಾಮ ಅಭಿವೃದ್ಧಿಮಾಡಬೇಕಾದರೆ, ಯುವಕ ಪಡೆಗಳು ಅವಶ್ಯವಾಗಿದೆ.

Scanned by CamScanner



ಒಂದೇ ಕುಟುಂಬದ ಸದಸ್ಯರು ಒಬ್ಬರು ಇನ್ನೊಬ್ಬರ ಒಳಿತಿಗಾಗಿ ದುಡಿಯದೇ ಇರುವ ಈ ಕಾಲದಲ್ಲಿ, ಅಪರಿಚಿತರ ಸೇವೆ ಮಾಡುವವರೂ ಇದ್ದಾರೆ ಎಂದರೆ, ನಿಜವಾಗಿಯೂ ಆಶ್ಚರ್ಯಕರ. ಕಾರ್ಮೆಲ್ ಸೇವಾ ಸದನದ ಸದಸ್ಯರು ಪರಿಚಯ ಇಲ್ಲದಂತಹ ಈ ಬಡ ಹಳ್ಳಿಗೆ ಬಂದು, ಎಲ್ಲರನ್ನೂ ಪರಿಚಯಿಸಿ, ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ, ಯುವಕರ ಮತ್ತು ಮಹಿಳೆಯರ ಏಳಿಗೆಗೆ ದುಡಿಯುತ್ತಿದ್ದಾರೆ. ನಮ್ಮ ಮಹಾಜನದ ಹಾಗೆ ಬಂದು ಮಕ್ಕಳಿಗೆ ಉಚಿತ ಟ್ಯೂಶನ್ ಕ್ಲಾಸ್ ಮತ್ತು ಮಹಿಳೆಯರಿಗೆ ಹೊಲಿಗೆ ತರಬೇತಿ, ಬಡವರಿಗೆ ಬಟ್ಟೆ ಕೊಟ್ಟು ಸೇವೆ ಸಲ್ಲಿಸುತ್ತಿದ್ದಾರೆ. ನೀವು ಮಾಡಿದ ಎಲ್ಲಾ ಸೇವೆಗಳಿಗೆ ನಾನೂ ನಮ್ಮ ಗ್ರಾಮಸ್ಥರೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಜಾತಿ, ಮತ ಬೇಧವಿಲ್ಲದೇ, ಪರರ ಒಳಿತಿಗಾಗಿ ದುಡಿಯುತ್ತಿರುವ ನಿಮ್ಮ ಸಂಸ್ಥೆ ಹೆಮ್ಮರವಾಗಿ ಬೆಳೆಯಲಿ ಎಂದು ಹಾರೈಸುತ್ತೇವೆ.

ಪ್ರೀತಿಯ,

**ಶೇಖರಪ್ಪ**



ಸಮಾಜ ಸೇವೆ ಎಂದು ಹೇಳುವವರು ಅನೇಕರು. ಆದರೆ ಕಾರ್ಯದಲ್ಲಿ ಮಾಡಿ ತೋರಿಸುವವರು ಬಹಳ ವಿರಳ. ಕಾರ್ಮೆಲ್ ಸೇವಾ ಸದನ ನಿಜವಾಗಿಯೂ ಮಾತನ್ನೆತ್ತದೆ ಕಾರ್ಯದ ಮುಖಾಂತರ ಸಮಾಜಸೇವಾ ಕಾರ್ಯವನ್ನು ಮಾಡುತ್ತಿದೆ. ಜಾತಿ, ಮತ, ಭೇದ, ಮೇಲು–ಕೀಳು ಎಂದು ಲೆಕ್ಕಿಸದೆ ಮನುಷ್ಯತ್ವಕ್ಕೆ ಮಾನ್ಯತೆ ಕೊಡುತ್ತದೆ. ಬರುವ ಜನರನ್ನು ತಾಳ್ಮೆಯಿಂದ ಮಾತಾಡಿಸಿ, ಅವರ ಕಷ್ಟ ಸಂಕಷ್ಟಗಳನ್ನು ತಾಳ್ಮೆಯಿಂದ ಆಲಿಸುವವರು. ಇಂತಹ ಮಹಾನ್ ವ್ಯಕ್ತಿಗಳು ಹಡಗಲಿಗೆ ದೇವರ ಪ್ರತಿರೂಪವೆನ್ನಬಹುದು. ಸಂಕ್ಷಿಪ್ತವಾಗಿ ಹೇಳುವುದೇನೆಂದರೆ, ನಮ್ಮಿಂದ ಏನನ್ನೆ ಬಯಸದೆ ನಮಗೆ ಒಳ್ಳೆಯದನ್ನೇ ಮಾಡುವವರು, ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವವರು, ಕಷ್ಟಕ್ಕೆ ಹೆದರದೆ ದುಡಿದು ಬದುಕಲು ಹೇಳುವವರು, ಜಾತಿ, ಮತ, ತೊರೆದು ಅಭಿವೃದ್ಧಿ ಮಾಡವವರು, ಅನ್ನ, ಗಾಳಿ, ನೀರಿನ ಅವಶ್ಯಕತೆಯಷ್ಟೆ ವಿದ್ಯಾಭ್ಯಾಸಕ್ಕೂ ಮಹತ್ವವನ್ನೀಡುವವರು. ನಮ್ಮ ವರಕನಹಳ್ಳಿ ಗ್ರಾಮ ಕಾರ್ಮೆಲ್ ಸೇವಾ ಸದನದಿಂದ ಸಾಕಷ್ಟು ಸೌಲಭ್ಯಗಳನ್ನು ಪಡೆದಿದೆ. ಸಮಸ್ತಅಭಿವೃದ್ಧಿಗೆ ಕಾರಣರಾದ ಕಾರ್ಮೆಲ್ ಸೇವಾ ಸದನದ ಮಹನೀಯರಿಗೆ ನಮ್ಮ ವೈಯಕ್ತಿಕವಾಗಿಯೂ ಗ್ರಾಮದ ಪರವಾಗಿಯೂ ಹೃತ್ಪೂರ್ವಕ ಧನ್ಯವಾದಗಳು.

ಪ್ರೀತಿಯ

**ಕೊಟ್ರೇಶ್**

Scanned by CamScanner

## ಕಾರ್ಮೆಲ್ ಮೋಟಾರ್ ಡ್ರೈವಿಂಗ್ ಸ್ಕೂಲ್ ಉದ್ಘಾಟನೆ



**PRAJAVANI :- 27 – 10 – 2002**

## ನಿರುದ್ಯೋಗಿಗಳಿಗೆ ಸ್ವಾವಲಂಬನೆ ತರಬೇತಿ

**KANNADA PRABHA : - 26 – 3 – 20**

## ಮುದೆನೂರಿಲ್ಲಿ ದಂತ ತಪಾಸಣಾ ಶಿಬಿರ

ಹೂವಿನಹಡಗಲಿ, ಕಾರ್ಮೆಲ್ ಸೇವಾ ಸದನದ ವತಿಯಿಂದ ಸಮೀಪದ ಮುದೇನೂರು ಗ್ರಾಮದಲ್ಲಿ ಉಚಿತ ದಂತ ತಪಾಸಣಾ ಶಿಬಿರವನ್ನು ... ಮುದೇನೂರು ಯುವಕ ಸಂಘದ ಸಹಕಾರ ... ಫಾ. ವಿಲಿಯಂ ಮಿರಾಂದ ಶಿಬಿರವನ್ನು

**JANAVAHINI :- 30 – 11 – 2002**

## ಸಮಾಜ ಸೇವೆಯತ್ತ ಕಾರ್ಮೆಲ್ ಸೇವಾ ಸದನ



## “ಕಾರ್ಮೆಲ್ ಸೇವಾ ಸ...



## ಹೂವಿನಹಡಗಲಿಯಲ್ಲಿ ಕ್ರಿಸ್‌ಮಸ್ ಆಚರಣೆ

ಕನ್ನಡಪ್ರಭ ವಾರ್ತೆ, ಹೂವಿನಹಡಗಲಿ, ಡಿ.30
ಸಮಾಜ ಸೇವಾ ಸಂಸ್ಥೆ ಕಾರ್ಮೆಲ್ ಸೇವಾ ಸದನ ವಾರದಲ್ಲಿ ಕ್ರಿಸ್ಮಸ್ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಬಾಲ ಯೋಸುವಿನ ದೇವಾಲ